ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 169 RNI Number : KNKAN/25/A2770 27-06-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :169 ರಾಯಚೂರು 27-06-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ದಾಖಲಾತಿ ಇಲ್ಲದೆ ಯಾವುದೇ ಸರಕು ಸಾಗಣೆ ವಾಹನ ಗಡಿ ದಾಟದಂತೆ ನೋಡಿಕೊಳ್ಳಿ-ಸಿಎಂ

ಬೆಂಗಳೂರು,ಜೂ.26-

ಅಗತ್ಯ ದಾಖಲಾತಿಯಿಲ್ಲದೆ ರಾಜ್ಯದ ಗಡಿ ಚೆಕ್ ಪೋಸ್ಟ್‌ಗಳಲ್ಲಿ ಯಾವುದೇ ರೀತಿಯ ಸರಕು ಸಾಗಣೆ ವಾಹನಗಳು ದಾಟಬಾರದು. ತೆರಿಗೆ ಸೋರಿಕೆ ಹಾಗೂ ವಂಚನೆಗೆ ಅವಕಾಶ ಕಲ್ಪಿಸಬಾರದು. ಯಾವುದೇ ರೀತಿಯ ರಾಜಿ ಅಥವಾ ನಿರ್ಲಕ್ಷ್ಯ ಕಂಡುಬಂದರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಸಿದರು.

ವಿಧಾನಸೌಧದಲ್ಲಿ ಶುಕ್ರವಾರ ವಾಣಿಜ್ಯ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಯಿತು.

ಸರಕು ಸಾಗಣೆ ವಾಹನ ಸೂಕ್ತ ಲೆಕ್ಕಪತ್ರ, ದಾಖಲೆಯಿಲ್ಲದೆ ರಾಜ್ಯದ ಗಡಿ ದಾಟಬಾರದು. ಇದು ವಾಣಿಜ್ಯ ಇಲಾಖೆಯ ಕಾರ್ಯವೈಖರಿಯ ಮೂಲ ತತ್ವವಾಗಬೇಕು. ಗಡಿ ಜಿಲ್ಲೆಗಳಿಂದ ರಾಜ್ಯದ ಎಲ್ಲ ಭಾಗಗಳಲ್ಲೂ ನನ್ನದೇ ಆದ ಸಂಪರ್ಕಗಳಿವೆ. ಅಧಿಕಾರಿಗಳ ಕಾರ್ಯನಿರ್ವಹಣೆಯಲ್ಲಿ ಯಾವುದೇ ಲೋಪವೆಸಗುವುದು ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದರು.

ವಾಣಿಜ್ಯ ತೆರಿಗೆ ಅಧಿಕಾರಿಗಳು ಸರ್ಕಾರದ ಶಕ್ತಿ. ನೀವು ಶಕ್ತಿ ಕೊಡದಿದ್ದರೆ ಸರ್ಕಾರ ನಡೆಸುವುದು ಕಷ್ಟ. ವಾಣಿಜ್ಯ ತೆರಿಗೆ ಇಲಾಖೆಗೆ ಪ್ರಸ್ತುತ ಹಣಕಾಸು



ವರ್ಷಕ್ಕೆ ನೀಡಿರುವ ತೆರಿಗೆ ಸಂಗ್ರಹದ ಗುರಿ ಮೀರಿ ಸಾಧನೆ ತೋರಿಸುತ್ತೀರೆಂಬ ವಿಶ್ವಾಸ ನನಗಿದೆ. ರಾಜ್ಯದಲ್ಲಿ ಸುಮಾರು 12 ಲಕ್ಷ ತೆರಿಗೆದಾರರ ಮಾಹಿತಿಯಿದೆ. ತಂತ್ರಜ್ಞಾನ ಮತ್ತು ದತ್ತಾಂಶ ವಿಶ್ಲೇಷಣೆ ಮೂಲಕ ಅವರನ್ನು ತೆರಿಗೆ ವ್ಯಾಪ್ತಿಗೆ ತಂದು ಗುರಿಯನ್ನು ಸಾಧಿಸುವುದಷ್ಟೇ ಅಲ್ಲ, ಅದನ್ನು ಮೀರಿಸುವ ಸಾಮರ್ಥ್ಯವೂ ನಿಮ್ಮಿಂದ ಸಾಧ್ಯವಿದೆ ಎಂದು ಹೇಳಿದರು.

ನಮ್ಮ ಉದ್ದೇಶ ಯಾರಿಗೂ ಅನಗತ್ಯ ತೊಂದರೆ ನೀಡುವುದಲ್ಲ. ಪ್ರಾಮಾಣಿಕ ತೆರಿಗೆದಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ತೆರಿಗೆ ಪಾವತಿಸುವ ಪ್ರತಿಯೊಬ್ಬ ನಾಗರಿಕನನ್ನೂ ಘನತೆ ಮತ್ತು ಗೌರವದಿಂದ ನಡೆಸಿಕೊಳ್ಳಬೇಕು. ಕಾನೂನು ಮೀರಿ, ಶೋಷಣೆ ಮಾಡಿ ಅಂತ ಹೇಳಲ್ಲ. ತೆರಿಗೆ ವಂಚನೆ ಹಾಗೂ ಸೋರಿಕೆಗೆ ಯಾವುದೇ ಅವಕಾಶ ಇರಕೂಡದು ಎಂದು ಸ್ಪಷ್ಟಪಡಿಸಿದರು.

ಪ್ರಾಮಾಣಿಕ ತೆರಿಗೆದಾರರಿಗೆ ಯಾವುದೇ ರೀತಿಯ ತೊಂದರೆ ಆಗಬಾರದು. ಅವರಿಂದ ಸುಲಿಗೆ ಮಾಡಬಾರದು. ಜಿಎಸ್‌ಟಿ ಸಂಗ್ರಹದಲ್ಲಿ ರಾಜ್ಯ ಉತ್ತಮ ಪ್ರಗತಿ ಸಾಧಿಸಿದೆ. ಶೇ.9ರಷ್ಟು ಪ್ರಗತಿಯಾಗಿದೆ. ಈ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಉತ್ತಮ ಸಾಧನೆಯಾಗಿದೆ. ಗುಜರಾತ್, ತಮಿಳುನಾಡು, ಹರಿಯಾಣ ರಾಜ್ಯಗಳಿಗಿಂತ ಹೆಚ್ಚು ಪ್ರಗತಿ ರಾಜ್ಯದಲ್ಲಿ ಆಗಿರುವುದು ಸಮಾಧಾನದ ಸಂಗತಿ. ಹೈದರಾಬಾದ್ ಐಐಟಿ ಸಹಯೋಗದಲ್ಲಿ ಜಿಎಸ್‌ಟಿ ವಂಚನೆ ಮೇಲೆ ತೀವ್ರ ನಿಗಾ ಇಡಲಾಗಿದೆ ಎಂದು ಹೇಳಿದರು.

ನಕಲಿ ರಶೀದಿ ಮತ್ತು ನಕಲಿ ಇನ್ ವಾಯ್ಸ್ ಗಳು ದೊಡ್ಡ ಸವಾಲಾಗಿದೆ. ಈ ಸವಾಲನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದೇವೆ. ಬೋಗಸ್ ಕಂಪನಿಗಳನ್ನು ಪತ್ತೆ ಹಚ್ಚಿ 166 ಕೋಟಿ ರೂ ಸಂಗ್ರಹಿಸಿದ್ದೇವೆ. ಬೋಗಸ್ ಕಂಪನಿ ಸ್ಥಾಪಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಪ್ರಮಾಣ ಹೆಚ್ಚಿಸುವಂತೆ ಸಿಎಂ ತಿಳಿಸಿದರು.

ಕೆಎಂಎಸ್ ಫೇಸ್ ರೀಡಿಂಗ್ ಹಾಜರಾತಿ ವ್ಯವಸ್ಥೆ ತಕ್ಷಣ ಹಿಂಪಡೆಯಲು
ರಾಜ್ಯ ಸರ್ಕಾರಕ್ಕೆ ವಕೀಲ ಅನಿಲ್ ಕುಮಾರ್ ಹೊನ್ನಟಗಿ ಆಗ್ರಹ

ಸಿರವಾರ, ಜೂ. 26

ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ಕಡ್ಡಾಯಗೊಳಿಸಿರುವ ಕೆಎಂಎಸ್ ಫೇಸ್ ರೀಡಿಂಗ್ ಹಾಜರಾತಿ ವ್ಯವಸ್ಥೆಯನ್ನು ತಕ್ಷಣ ಹಿಂಪಡೆದು, ಹಿಂದಿನ ಹಾಜರಾತಿ ಪದ್ಧತಿಯನ್ನು ಪುನಃ ಜಾರಿಗೊಳಿಸಬೇಕು ಎಂದು ಸಿರವಾರದ ವಕೀಲ ಅನಿಲ್ ಕುಮಾರ್ ಹೊನ್ನಟಗಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ರಾಜ್ಯಪಾಲರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷರಿಗೆ ಸಲ್ಲಿಸಿರುವ ಮನವಿಯಲ್ಲಿ,ಕೆಎಂಎಂಎಸ್ ವ್ಯವಸ್ಥೆಯು ನೆಲಮಟ್ಟದಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಅವರು ತಿಳಿಸಿದ್ದಾರೆ.

ಗ್ರಾಮೀಣ, ಗುಡ್ಡಗಾಡು, ಅರಣ್ಯ ಹಾಗೂ ಗಡಿ ಪ್ರದೇಶಗಳ ಶಾಲೆಗಳಲ್ಲಿ ಸಮರ್ಪಕ ಮೊಬೈಲ್ ನೆಟ್‌ವರ್ಕ್ ಮತ್ತು ಇಂಟರ್ನೆಟ್ ಸಂಪರ್ಕದ ಕೊರತೆಯಿಂದ ಶಿಕ್ಷಕರು ಪ್ರತಿದಿನ ಹಾಜರಾತಿ ದಾಖಲಿಸುವಲ್ಲಿ ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ಸರ್ವರ್ ವೈಫಲ್ಯ, ತಾಂತ್ರಿಕ ದೋಷ, ಮುಖ ಗುರುತಿಸುವಿಕೆಯ ಸಮಸ್ಯೆ ಹಾಗೂ ಅಪ್ಲಿಕೇಶನ್ ಕಾರ್ಯನಿರ್ವಹಣೆಯ ವೈಫಲ್ಯದಿಂದ ಶಾಲೆಗೆ ಸಮಯಕ್ಕೆ ಹಾಜರಾಗಿದ್ದರೂ



ಹಾಜರಾತಿ ದಾಖಲಾಗದ ಘಟನೆಗಳು ಹೆಚ್ಚುತ್ತಿವೆ ಎಂದು ಅವರು ಹೇಳಿದ್ದಾರೆ.

ಈ ವ್ಯವಸ್ಥೆಯಿಂದ ಶಿಕ್ಷಕರ ಸೇವಾ ದಾಖಲೆ, ವೇತನ, ರಜೆ ಹಾಗೂ ಆಡಳಿತಾತ್ಮಕ ಮೌಲ್ಯಮಾಪನದ ಮೇಲೆ ಪ್ರತಿಕೂಲ ಪರಿಣಾಮ ಬೀಳುವ ಆತಂಕವಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಬದಲು ತಾಂತ್ರಿಕ ಸಮಸ್ಯೆಗಳ ಪರಿಹಾರದಲ್ಲೇ ಅಮೂಲ್ಯ ಸಮಯ ಕಳೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯದ ಸುಮಾರು ★46 ಸಾವಿರಕ್ಕೂ ಹೆಚ್ಚು ಮುಖ್ಯೋಪಾಧ್ಯಾಯರು ಹಾಗೂ ಶಾಲಾ ಮುಖ್ಯ ಶಿಕ್ಷಕರು ಮಧ್ಯಾಹ್ನ ಉಪಾಹಾರ ಯೋಜನೆ, ಮೊಟ್ಟೆ ಹಾಗೂ ಬಾಳೆಹಣ್ಣು ವಿತರಣೆ, ಲೆಕ್ಕಪತ್ರ ನಿರ್ವಹಣೆ ಸೇರಿದಂತೆ ಹಲವು ಆಡಳಿತಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ ವ್ಯವಸ್ಥೆಯ ಒತ್ತಡ ಅವರ ಕಾರ್ಯಕ್ಷಮತೆಯ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಅವರು ತಿಳಿಸಿದ್ದಾರೆ.ಅಱಇದಲ್ಲದೆ ಸಾವಿರಾರು ಶಿಕ್ಷಕರು ಆಗಿ ಚುನಾವಣಾ ಕರ್ತವ್ಯ, ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ಇತರ ಸರ್ಕಾರಿ ಕಾರ್ಯಗಳಲ್ಲಿ ನಿರತರಾಗಿರುವ ಕಾರಣ, ಪ್ರತಿಯೊಂದು ಸಂದರ್ಭದಲ್ಲೂ ಮೂಲಕ ಹಾಜರಾತಿ ದಾಖಲಿಸುವುದು ಪ್ರಾಯೋಗಿಕವಾಗಿ ಸಾಧ್ಯವಾಗುತ್ತಿಲ್ಲ ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಸರ್ಕಾರವು ಶಿಕ್ಷಕರಿಗೆ ಸ್ಮಾರ್ಟ್‌ಫೋನ್, ಡೇಟಾ ವೆಚ್ಚ ಅಥವಾ ಅಗತ್ಯ ತಾಂತ್ರಿಕ ಸೌಲಭ್ಯಗಳನ್ನು ಒದಗಿಸದೆ ವೈಯಕ್ತಿಕ ಸಂಪನ್ಮೂಲಗಳ ಬಳಕೆಯನ್ನು

3ನೇ ಪುಟ.....

ಎಂಎಲ್ಸಿ ನಾಗರಾಜ ಯಾದವ್ ಗಬ್ಬೂರಿಗೆ ಭೇಟಿ



ರಾಯಚೂರು,ಜೂ.26-

ಕಾಂಗ್ರೆಸ್ ಪಕ್ಷದ ವಕ್ತಾರರು ಹಾಗೂ ವಿಧಾನ ಪರಿಷತ್ ಸದಸ್ಯರಾದ ನಾಗರಾಜ ಯಾದವ ಅವರು ಗುರುವಾರದಂದು ತಾಲ್ಲೂಕಿನ ಗಬ್ಬೂರು ಗ್ರಾಮದ ಶ್ರೀ ಕೃಷ್ಣದೇವಸ್ಥಾನಕ್ಕೆ ಭೇಟಿ ನೀಡಿದರು.

ಯಾದವ ಸಮಾಜದ ವಿವಾಹ ಕಾರ್ಯಕ್ರಮದ ನಿಮಿತ್ಯವಾಗಿ ಕಾಂಗ್ರೆಸ್ ಪಕ್ಷದ ವಕ್ತಾರರು ಹಾಗೂ ವಿಧಾನ ಪರಿಷತ್ ಸದಸ್ಯರಾದ ನಾಗರಾಜ ಯಾದವ ಅವರು ಗಬ್ಬೂರು ಗ್ರಾಮದ ಶ್ರೀ ಶಾಂತಮೂರ್ತಿ ಕಲ್ಯಾಣ ಮಂಟಪಕ್ಕೆ ಆಗಮಿಸಿ ನೂತನ ವಧು ವರರಿಗೆ ಶುಭ ಹಾರೈಸಿದರು. ನಂತರ ಶ್ರೀ ಮಠಕ್ಕೆ ಭೇಟಿ ನೀಡಿ ಶ್ರೀ ಬೂದಿಬಸವೇಶ್ವರರ ಆರ್ಶೀವಾದ ಪಡೆದರು.

ಈ ವೇಳೆ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಸದಾಶಿವಯ್ಯ ಮಠದ್ ಅವರು ರಾಜ್ಯ ಕಾಂಗ್ರೆಸ್ ಪಕ್ಷದ ವಕ್ತಾರರು ಹಾಗೂ ವಿಧಾನ ಪರಿಷತ್ ಸದಸ್ಯರಾದ ನಾಗರಾಜ ಯಾದವ ಅವರಿಗೆ ಸನ್ಮಾನಿಸಿ ಗೌರವಿಸಿದರು. ಇದೇ ವೇಳೆ ಜಿಲ್ಲೆಯಲ್ಲಿನ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚಿಸಿದರು.

ಈ ವೇಳೆ ಮಾತನಾಡಿದ ಕಾಂಗ್ರೆಸ್ ಪಕ್ಷದ ವಕ್ತಾರರು ಹಾಗೂ ವಿಧಾನ ಪರಿಷತ್ ಸದಸ್ಯರಾದ ನಾಗರಾಜ ಯಾದವ ದೇಶಕ್ಕೆ ಕಾಂಗ್ರೆಸ್ ಪಕ್ಷದ ನೂತನ

3ನೇ ಪುಟ.....

ಸ್ಥಳೀಯ ಕಲಾವಿದರ ಸನ್ಮಾನಕ್ಕೆ ನಾಳೆ ಪಿಜಿಕೆ ರಂಗ ಪುರಸ್ಕಾರ ಪ್ರದಾನ
ಶಿವಕುಮಾರಿ ತಾಯಣ್ಣ ಯರಗೇರಗೆ ಗೌರವ
ರಂಗಗೀತೆ-ಜಾನಪದ ಗಾಯನಕ್ಕೂ ವೇದಿಕೆ

ರಾಯಚೂರು, ಜೂ.26-

ರಂಗಭೂಮಿ ಹಾಗೂ ಸ್ಥಳೀಯ ಕಲಾ ಪರಂಪರೆಯ ಗೌರವಕ್ಕಾಗಿ ರಂಗಸಿರಿ ಸಾಂಸ್ಕೃತಿಕ ಕಲಾ ಬಳಗ, ರಾಯಚೂರು ಹಾಗೂ ಕರ್ನಾಟಕ ಬೀದಿನಾಟಕ ಅಕಾಡಮಿ ಆಶ್ರಯದಲ್ಲಿ ಪಿಜಿಕೆ ರಂಗ ಪುರಸ್ಕಾರ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಲಾಯಿತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಂಗಸ್ವಾಮಿ ಅವರು, ಸ್ಥಳೀಯ ಕಲಾವಿದರ ಸಾಧನೆ ಮತ್ತು ಕಲಾ ಸೇವೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಈ



ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಈ ವರ್ಷದ ಪಿಜಿಕೆ ರಂಗ ಪುರಸ್ಕಾರವನ್ನು ಶ್ರೀಮತಿ ಶಿವಕುಮಾರಿ ತಾಯಣ್ಣ ಯರಗೇರ ಅವರಿಗೆ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮವನ್ನು ಬಸವರಾಜ ಕಳಸ (ಏಮ್ಸ್ ಹೋರಾಟಗಾರರು, ರಾಯ ಚೂರು) ಉದ್ಘಾಟಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ರಂಗಭೂಮಿ ಕಲಾವಿದರಾದ ವಿ.ಎನ್. ಅಕ್ಕಿ ವಹಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಿಂಗ್ರಿ ನರಸಪ್ಪ, ಡಾ. ಬಾಬು ಜಗಜೀವನರಾವ್, ಬಿ. ಬಸವರಾಜ್, ಭೀಮರಾಯ ಹದ್ದಿನಾಳ, ಕೊರೆನಣ್ ಹಾಗೂ ಕು. ಮರಿಯಮ್ಮ ಚೂಡಿ ಭಾಗವಹಿಸ

3ನೇ ಪುಟ.....

ರಾಯಚೂರು, ಕೊಪ್ಪಳ ಜಿಲ್ಲೆಗಳ ಪ್ರಕೃತಿ ವಿಕೋಪ
ಉಸ್ತುವಾರಿಯಾಗಿ ಡಾ.ಶರಣಪ್ರಕಾಶ್ ಪಾಟೀಲ್ ನೇಮಕ

ರಾಯಚೂರು: ರಾಜ್ಯದಲ್ಲಿ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲ್ವಿಚಾರಣೆಯನ್ನು ಸಮರ್ಪಕವಾಗಿ ನಡೆಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಜಿಲ್ಲಾವಾರು ಉಸ್ತುವಾರಿ ಜವಾಬ್ದಾರಿಯನ್ನು ಸಚಿವರಿಗೆ ಹಂಚಿಕೆ ಮಾಡಿ ಹೊಸ ಅಧಿಸೂಚನೆ ಹೊರಡಿಸಿದೆ.

ಈ ಅಧಿಸೂಚನೆಯ ಪ್ರಕಾರ ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳ ಪ್ರಕೃತಿ ವಿಕೋಪ ನಿರ್ವಹಣೆಯ ಉಸ್ತುವಾರಿಯಾಗಿ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಅವರನ್ನು ನೇಮಕ ಮಾಡಲಾಗಿದೆ.

ಮುಂದಿನ ಆದೇಶದವರೆಗೆ



ಆಯಾ ಸಚಿವರುಗಳಿಗೆ ವಹಿಸಲಾದ ಜಿಲ್ಲೆಗಳಲ್ಲಿ ಪ್ರಕೃತಿ ವಿಕೋಪ ನಿರ್ವಹಣೆಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳ ಮೇಲ್ವಿಚಾರಣೆ ಹಾಗೂ ಸಮನ್ವಯದ ಜವಾಬ್ದಾರಿ ಇರಲಿದೆ ಎಂದು ಸರ್ಕಾರ ತಿಳಿಸಿದೆ.

ರಾಜ್ಯದಲ್ಲಿ ಮಳೆಗಾಲ ಆರಂಭವಾಗಿರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮಗಳು, ತುರ್ತು ಪರಿಸ್ಥಿತಿಗಳ ನಿರ್ವಹಣೆ ಹಾಗೂ ಪರಿಹಾರ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವ ಉದ್ದೇಶದಿಂದ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ.

ಈ ಸಂಬಂಧ ರಾಜ್ಯಪಾಲರ ಆದೇಶಾನುಸಾರ ಸರ್ಕಾರ ಅಧಿಕೃತ ಅಧಿಸೂಚನೆ ಹೊರಡಿಸಿದೆ.

30ರಂದು 7 ಗಂಟೆ ವಿದ್ಯುತ್ ವ್ಯತ್ಯಯ:
ಹಲವು ಪ್ರದೇಶಗಳಿಗೆ ಜೆಸ್ಕಾಂ ಮುನ್ಸೂಚನೆ

ರಾಯಚೂರು, ಜೂ.26-

ಎ.ಪಿ.ಎಂ.ಸಿ 110 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ ಕಾಮಗಾರಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಜೂನ್ 30ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ರಾಯಚೂರು ನಗರದ ಹಾಗೂ ಸುತ್ತಮುತ್ತಲಿನ ಹಲವು ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಜೆಸ್ಕಾಂ ಪ್ರಕಟಣೆ ತಿಳಿಸಿದೆ.

ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ನಗರ ವಿಭಾಗ02 ವ್ಯಾಪ್ತಿಯಲ್ಲಿ ನಡೆಯಲಿರುವ ಕಾಮಗಾರಿಯಿಂದ ಮಂಚಲಾಪುರ ರಸ್ತೆ, ರಿಮ್ಸ್ ಆಸ್ಪತ್ರೆ, ಒಪೆಕ್ ಆಸ್ಪತ್ರೆ, ಇಂಡಸ್ಟ್ರಿಯಲ್ ಏರಿಯಾ, ಎಲ್.ಬಿ.ಎಸ್ ನಗರ, ಪೊಲೀಸ್ ಕಾಲೋನಿ, ಅಲ್ಲಮಪ್ರಭು ಕಾಲೋನಿ, ಗಂಜ್ ಪ್ರದೇಶ, ಚಂದ್ರಬಂಡ ರಸ್ತೆ, ಹುಂಡೇಕರ್ ಕಾಲೋನಿ, ಕೆ.ಐ.ಡಿ.ಬಿ ಕಾಲೋನಿ, ಆಶ್ರಯ ಕಾಲೋನಿ, ಯರಮರಸ್ ಕ್ಯಾಂಪ್, ಪೋತಗಲ್, ಅಮರಾವತಿ ಸೇರಿದಂತೆ ಹಲವು ಪ್ರದೇಶಗಳು ವಿದ್ಯುತ್ ವ್ಯತ್ಯಯಕ್ಕೆ ಒಳಗಾಗಲಿವೆ.

ಇದಲ್ಲದೆ ಯರಮರಸ್ ಕೈಗಾರಿಕಾ ಪ್ರದೇಶ, ನಂದಿನಿ ಹಾಲು ಡೈರಿ, ಬೈಪಾಸ್ ರಸ್ತೆ ಕೈಗಾರಿಕಾ ವಲಯ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಎಸ್.ಎಲ್.ಎನ್ ಇಂಜಿನಿಯರಿಂಗ್ ಕಾಲೇಜು, ಐಐಐಟಿ ಯರಮರಸ್ ಕ್ಯಾಂಪ್,

3ನೇ ಪುಟ.....

ಓಂ ಸಾಯಿ ಧ್ಯಾನ ಮಂದಿರದಲ್ಲಿ ಎಸ್‌ಐಆರ್ ಕಾರ್ಯಕ್ರಮ ಕುರಿತು ಮಾಹಿತಿ

ರಾಯಚೂರು,ಜೂ.26-

ನಗರದ ಸಾರ್ವಜನಿಕ ಗ್ರಂಥಾಲಯ ಹತ್ತಿರವಿರುವ ಓಂ ಸಾಯಿ ಮಂದಿರದಲ್ಲಿ ಜಿಲ್ಲಾಡಳಿತ. ಜಿಲ್ಲಾ ಪಂಚಾಯತ್ ಸ್ವಿಪ್ ಸಮಿತಿ ಮತದಾರ



ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಮಾಹಿತಿಯ ಕಾರ್ಯಕ್ರಮ ಜರಗಿತು. ಮತದಾರರ ಸಾಕ್ಷರತಾ ಕ್ಲಬ್ ಹಾಗೂ ಎಸ್‌ಐಆರ್ ಕಾರ್ಯಕ್ರಮ ಸಂಯೋಜನೆ ಅಧಿಕಾರಿ ಡಾ. ದಂಡಪ್ಪ ಬಿರಾದಾರ ಮಾತನಾಡುತ್ತಾ. ಈ ಕಾರ್ಯಕ್ರಮವನ್ನು ಈಗಾಗಲೇ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ತಾಲೂಕ್ ಆಡಳಿತ ತಾಲೂಕು ಪಂಚಾಯತ್ ಸ್ವೀಪ ಸಮಿತಿ ರಾಯಚೂರು ಎಲ್ಲಾ ಬಿ.ಎಲ್.ಓ ವರಿಗೆ ಉತ್ತಮವಾದ ರೀತಿಯಲ್ಲಿ ತರಬೇತಿಯನ್ನು ನೀಡಿ ಗೊಂದಲ ರಹಿತ ಮತ್ತು ಸ್ಪಷ್ಟ ಮತದಾರ ಪಟ್ಟಿಯ ತಯಾರಿಸುವ ಹಿನ್ನೆಲೆಯಲ್ಲಿ ಎಸ್‌ಐಆರ್ ಕಾರ್ಯಕ್ರಮವನ್ನು ಜಿಲ್ಲೆಯ ನಡೆಯುತ್ತಿರುವುದರಿಂದ ಪ್ರಭುತ್ವ ಮತದಾರರು ಮತ್ತು ಸಾರ್ವಜನಿಕರು ಚುನಾವಣೆ ಈ ಒಂದು ಕಾರ್ಯಕ್ಕೆ ಕೈಜೋಡಿಸಿ ತಮ್ಮ ಮನೆಗೆ ಬಂದ ಬಿ ಎಲ್ ಓ ಅವರವರಿಗೆ ಉತ್ತಮವಾದ ಮಾಹಿತಿಯನ್ನು ಕೊಟ್ಟು ಇಡೀ ರಾಜ್ಯದಲ್ಲಿಯೇ ಮಾದರಿಯ ಎಸ್.ಐ.ಆರ್ ಕಾರ್ಯಕ್ರಮಕ್ಕೆ ನಾವುಗಳು ಸಹಕಾರ ಕೈಜೋಡಿಸೋಣ ಜೊತೆಗೆ ಗೊಂದಲ ರಹಿತ ಸ್ಪಷ್ಟ ಶುದ್ಧ ಮಾದರಿಯ ಮತದಾರ ಪಟ್ಟಿ ತಯಾರಿಸುವುದರ ಮೂಲಕ ಪ್ರಜಾಪ್ರಭುತ್ವ ಆಡಳಿತವನ್ನು ಬಲಪಡಿಸೋಣ. ಮನುಷಿರಿಗೆ ಹಕ್ಕು ಎಷ್ಟು ಮುಖ್ಯವೋ ಮತದಾನ ಮಾಡುವುದು ನಮ್ಮ ಕರ್ತವ್ಯ ಹೌದು. ಆ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವ ಆಡಳಿತವನ್ನು ಬಲಪಡಿಸಲು ಮತದಾರರ ಮತದಾನದ ಪಟ್ಟಿಯಲ್ಲಿ ಹೆಸರು ಸೇರಿಸಬೇಕು ಎಂದು ಹೇಳಿದರು.ಡಾ ಬಿರಾದಾರ ಹೇಳಿದರು. ನಂತರ ಓಂ ಸಾಯಿ ಮಂದಿರದ ಸಂಸ್ಥಾಪಕರ ಹಾಗೂ ಮುಖ್ಯಸ್ಥರಾದ ಶ್ರೀ ಸಾಯಿ ಕಿರಣ್ ಆದೋನಿ ಗುರೂಜಿ ಇವರು ಮಾತನಾಡುತ್ತಾ .ನಮ್ಮ ಜಿಲ್ಲೆಯಲ್ಲಿ ಎಸ್.ಐ.ಆರ್ ಕಾರ್ಯಕ್ರಮ ಯಶಸ್ವಿಗೊಳಿಸಲು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು .ಕಾರಣ ಪ್ರತಿಯೊಬ್ಬ ಬಿ.ಎಲ್.ಒಗಳು ಜೂನ್ 30 ರಿಂದ ಮನೆ ಮನೆಗೆ ಭೇಟಿ ಮಾಡುವ ಸಂದರ್ಭದಲ್ಲಿ ಅವರು ಕೇಳಿದ ಮಾಹಿತಿಯನ್ನು ನೀಡಬೇಕು ಡಾ. ಬಿರಾದಾರ ಸರ್ ಇದರ ಬಗ್ಗೆ ಸಂಪೂರ್ಣವಾಗಿ ನಮ್ಮ ಮಂದಿರದ ಸಕಲ ಸದ್ಭಕ್ತರಿಗೆ ಮಾಹಿತಿಯನ್ನು ನೀಡಿ ಉತ್ತಮವಾದ ಕಾರ್ಯವನ್ನು ಮಾಡಿದ್ದಾರೆ .ಅವರ ಈ ಕಾರ್ಯಕ್ಕೆ ನಿಮ್ಮೆಲ್ಲರ ಪರವಾಗಿ ವಿಶೇಷ ಅಭಿನಂದನೆಗಳು .ಎಸ್‌ಐಆರ್ ಮತದಾರರ ಪಟ್ಟಿಯ ಪರಿಷ್ಕನ್ ಕಾರ್ಯಕ್ರಮಕ್ಕೆ ಸಹಕಾರ ತೋರಿಸಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಖ್ಯಾತ ಚಲನಚಿತ್ರ ನಟರಾದ ಆಶಾಪುರದ .ನರೇಶ್ ಪ್ರಿಯಾಂಕ ಹಾಗೂ ಮಂದಿರದ ಭಕ್ತರು ಉಪಸ್ಥಿತರಿದ್ದರು .ಶುಭಾ ಸಕಲರನ್ನು ಸ್ವಾಗತಿಸಿದರು. ರವಿ ಕಾರ್ಯಕ್ರಮದ ಕೊನೆಯಲ್ಲಿ ವಂದಿಸಿದನು.

ಆರ್‌ಎಲ್‌ಸಿ ಸಮ್ಮುಖದಲ್ಲಿ ಲಿಖಿತ ಭರವಸೆ;ಧರಣಿ ತಾತ್ಕಾಲಿಕ ಮುಂದೂಡಿಕೆ
ಭರವಸೆ ಈಡೇರದಿದ್ದರೆ ತೀವ್ರ ಹೋರಾಟ-ಎಸ್.ಎಂ.ಶಫಿ ಎಚ್ಚರಿಕೆ

ಹಟ್ಟಿಚಿನ್ನದ ಗಣಿ:

ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ನೇತೃತ್ವದಲ್ಲಿ ಕಳೆದ ಒಂದು ತಿಂಗಳಿನಿಂದ 3 ಹಂತಗಳಲ್ಲಿ ನಡೆದ ಹೋರಾಟಕ್ಕೆ ಮಹತ್ವದ ಯಶಸ್ಸು ದೊರೆತಿದೆ. ಕಾರ್ಮಿಕರ ವಿವಿಧ ನ್ಯಾಯಯುತ ಬೇಡಿಕೆಗಳ ಕುರಿತು ಆಡಳಿತ ಮಂಡಳಿ ಬಳ್ಳಾರಿಯ ಪ್ರಾದೇಶಿಕ ಕಾರ್ಮಿಕ ಆಯುಕ್ತರ (ಕೇಂದ್ರ)(ಆರ್ ಎಲ್ ಸಿ) ಸಮ್ಮುಖದಲ್ಲಿ ಲಿಖಿತ ಭರವಸೆ ನೀಡಿರುವ ಹಿನ್ನೆಲೆಯಲ್ಲಿ ನಡೆಯುತ್ತಿದ್ದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.




ಮೇ 25ರಿಂದ ಬೇಡಿಕೆಗಳನ್ನೊಳಗೊಂಡ ಕಪ್ಪು ಬ್ಯಾಡ್ಜ್ ಧರಿಸುವ ಮೂಲಕ ಆರಂಭವಾದ ಹೋರಾಟ, ಜೂನ್ 1ರಿಂದ ಪ್ರತಿದಿನ ಮುಖ್ಯ ದ್ವಾರದ ಸಭೆಗಳು,ಘೋಷಣೆಗಳು ಹಾಗೂ ಪ್ರತಿಭಟನೆಗಳ ಮೂಲಕ ಮುಂದುವರಿಯಿತು. ಬಳಿಕ ಜೂನ್ 15ರಿಂದ ಕಂಪನಿಯ ಮುಖ್ಯ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲಾಯಿತು.ಕಾರ್ಮಿಕರ ಐಕ್ಯ ಹೋರಾಟಕ್ಕೆ ಮಣಿದು ದಿನಾಂಕ 25/06/2026 ರಂದು ಬಳ್ಳಾರಿಯ ಪ್ರಾದೇಶಿಕ ಕಾರ್ಮಿಕ ಉಪ ಆಯುಕ್ತ ಹರ್ಮನ್ ದೀಪ್ ಸಿಂಗ್ ಸಮ್ಮುಖದಲ್ಲಿ ಹಟ್ಟಿ ಚಿನ್ನದ ಗಣಿ ಆಡಳಿತ ಮಂಡಳಿ ಮಾತುಕತೆ ನಡೆಸಿ ಹಲವು ಪ್ರಮುಖ ವಿಷಯಗಳಲ್ಲಿ ಲಿಖಿತವಾಗಿ ಭರವಸೆ ನೀಡಿದೆ.

ಹೋರಾಟದ ಫಲವಾಗಿ ಹೊಸ ವೇತನ ಒಪ್ಪಂದಕ್ಕೆ ಸಂಬಂಧಿಸಿದಂತೆ 10 ಶೇಕಡಾ ಇಂಟರಿಮ್ ರಿಲೀಫ್ ಕುರಿತು ಮುಂದಿನ ನಿರ್ದೇಶಕರ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಪ್ರಕಟಿಸುವುದಾಗಿ ಆಡಳಿತ ತಿಳಿಸಿದೆ.ಬಾಕಿ ಇರುವ ಪಿಎಲ್‌ಐಬಿ,ಎಕ್ಸ್ ಗ್ರೇಷಿಯಾ ಹಾಗೂ ಇತರೆ ಸೌಲಭ್ಯಗಳ ಕುರಿತು ಬೋರ್ಡ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದಾಗಿ ಭರವಸೆ ನೀಡಲಾಗಿದೆ.ಮೆಡಿಕಲ್ ಅನ್‌ಫಿಟ್ ಯೋಜನೆಗೆ ಸಂಬಂಧಿಸಿದ ಕಡತಗಳು ಹಣಕಾಸು ಇಲಾಖೆಗೆ ಕಳುಹಿಸುವ ಹಂತದಲ್ಲಿದ್ದು, ಪ್ರಕ್ರಿಯೆ ಮುಂದುವರಿದಿದೆ ಎಂದು ಆಡಳಿತ ಸ್ಪಷ್ಟಪಡಿಸಿದೆ.

ಇದರ ಜೊತೆಗೆ,ಕೆಲಸದಿಂದ ವಜಾಗೊಂಡಿದ್ದ 9 ಕಾರ್ಮಿಕರ ಪೈಕಿ 4 ಕಾರ್ಮಿಕರಿಗೆ ಮರುನೇಮಕಾತಿ ಆದೇಶ ನೀಡಿರುವುದು ಹೋರಾಟದ

3ನೇ ಪುಟ.....

ವಿದ್ಯುತ್ ಗ್ರಾಹಕರ ಕುಂದುಕೊರತೆ ಸಭೆ



ಸಿಂಧನೂರು,ಜೂ.26- *ಸಂಜೆಜ್ವಾಲೆ*

ಬಿಜೆಪಿ ನಗರ ಮಂಡಲ ಅಲ್ಪಸಂಖ್ಯಾತ ಮೋರ್ಚಾ ಸಿಂಧನೂರು ವತಿಯಿಂದ. ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿ. ನಿಯಮಿತವಾಗಿ ವಿದ್ಯುತ್ ಗ್ರಾಹಕರ ಕುಂದು ಕೊರತೆ ನಿವಾರಣ. ಸಂವಾದ ಸಭೆಯಲ್ಲಿ ಸಿಂಧನೂರು ನಗರದ ವಾರ್ಡ್ ನಂಬ್ರ್ 31. ಏಳೂ ರಾಗಿ ಕ್ಯಾಂಪ್ ನಲ್ಲಿರುವ. ವಿದ್ಯುತ್ ಸಂಪರ್ಕ ಲೈನ್ ಹಳೆಯದಾಗಿರುವುದರಿಂದ ಹೊಸ ವಿದ್ಯುತ್ ತಂತಿಯನ್ನು ಅಳವಡಿಸಿ.ಮತ್ತು ಈಗಿರುವ 3. ವಿದ್ಯುತ್ ಲೈನನ್ನು. 5. ವಿದ್ಯುತ್ ಲೈನ್ ಗಳಾಗಿ ಪರಿವರ್ತಿಸಬೇಕು. ಹಾಗೂ ವಿದ್ಯುತ್ ಲೈನ್ ವಿದ್ಯುತ್ ಕಂಬಗಳ ಮಧ್ಯೆ ಹೊಸ ಹೊಸ ವಿದ್ಯುತ್ ಕಂಬಗಳನ್ನು ಹಾಕಬೇಕೆಂದು. ಬಿಜೆಪಿ ನಗರ ಮಂಡಲ. ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರಾದ. ರಾಜು ಅಡವಿಬಾವಿ ಇವರಿಂದ. ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಹಕರ ಕುಂದು ಕೊರತೆ ನಿವಾರಣ ಸಂವಾದ ಸಭೆಯ ಅಧ್ಯಕ್ಷತೆ ವಹಿಸಿದಂತ. ಮಾನ್ಯ ಅಧಿಕ ಅಭಿಯಂತರರು. ವೃತ್ತ ಕಛೇರಿ ಜೆಸ್ಕಾಂ ರಾಯಚೂರ್ ರವರು ಆ ಕ್ಷಣದಲ್ಲಿ ನಮ್ಮ ಮನವಿಗೆ ಸ್ಪಂದಿಸಿ ಕೂಡಲೇ ಅಲ್ಲಿದ್ದ ಸಂಬಂಧಪಟ್ಟ ಅಧಿಕಾರಿಗಳಿಗೆ. ಕೂಡಲೇ ಈ ಸಮಸ್ಯೆಗಳನ್ನು ಬಗೆಹರಿಸಿ ಕೊಡಬೇಕೆಂದು ಸೂಚಿಸಿದರು. ಈ ಸಂದರ್ಭದಲ್ಲಿ ಪಕ್ಷದ ನಾಯಕರಾದ. ಆದೇಶ ನಾಯಕ್. ಮಲ್ಲಪ್ಪ ನಾಯಕ್. ಮಾನಪ್ಪ ಗೌಡ ನಾಯಕ್. ಹಾಗೂ ಇತರರು ಉಪಸ್ಥಿತರಿದ್ದರು.

ಪತ್ರಿಕಾ ಭವನದ ನವೀಕೃತ ಸಭಾಂಗಣ ಉದ್ಘಾಟಿಸಿದ ಸಚಿವ ಡಾ. ಶರಣಪ್ರಕಾಶ ಪಾಟೀಲ್



ಕಲಬುರಗಿ,ಜೂ.25-

ನಗರದ ಪತ್ರಿಕಾ ಭವನದಲ್ಲಿ ನೂತನವಾಗಿ ನವೀಕರಿಸಲಾದ ಸಭಾಂಗಣವನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರು ಬುಧವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಪತ್ರಿಕಾ ಭವನವು ಪತ್ರಕರ್ತರ ವೃತ್ತಿಪರ ಚಟುವಟಿಕೆಗಳಿಗೆ ಪ್ರಮುಖ ವೇದಿಕೆಯಾಗಿದ್ದು, ಹವಾನಿಯಂತ್ರಿತದಿಂದ ಕೂಡಿರುವ ನವೀಕೃತ ಹೊಸ ಸಭಾಂಗಣವು ಪತ್ರಿಕಾಗೋಷ್ಠಿ, ಚರ್ಚಾಸಭೆ ಹಾಗೂ ವಿವಿಧ ಕಾರ್ಯಕ್ರಮಗಳ ಆಯೋಜನೆಗೆ ಮತ್ತಷ್ಟು ಅನುಕೂಲ ವಾಗಲಿದೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಡಾ.ಬಿ.ಜಿ.ಪಾಟೀಲ್ ಮಾತನಾಡಿ, ಪತ್ರಿಕಾ ಭವನದ ಅಭಿವೃದ್ಧಿಯು ಜಿಲ್ಲೆಯ ಪತ್ರಕರ್ತರಿಗೆ ಇನ್ನಷ್ಟು ಉತ್ತಮ ವಾತಾವರಣದಲ್ಲಿ ಕಾರ್ಯ ನಿರ್ವಹಿಸಲು ನೆರವಾಗಲಿದೆ. ಸಮಾಜದ ಅಭಿವೃದ್ಧಿಯಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದ್ದು, ಪತ್ರಕರ್ತರ ಕಲ್ಯಾಣಕ್ಕೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಇಕ್ರಮ್ ಶರೀಫ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಾಬುರಾವ್ ಯಡ್ರಾಮಿ, ಪ್ರಧಾನ ಕಾರ್ಯದರ್ಶಿ ಭೀಮಾಶಂಕರ ಫಿರೋಜಾಬಾದ, ರಾಜ್ಯ ಸಮಿತಿ ಸದಸ್ಯ ರಾಜು ಉದನೂರ, ಉಪಾಧ್ಯಕ್ಷರಾದ ಹಣಮಂತರಾವ ಭೈರಾಮಡಗಿ, ಡಾ. ಶಿರಂಜನ ಸಂತ್ಯಪೇಟ್, ಅರುಣ ಕದಂ, ಅನಿಲ್ ಸ್ವಾಮಿ ಹಾಗೂ ಸಂಘದ ಇತರ ಪದಾಧಿಕಾರಿಗಳು, ಪತ್ರಕರ್ತರು ಉಪಸ್ಥಿತರಿದ್ದರು.

ನದಿಗಳ ಜೋಡಣೆ ರಾಷ್ಟ್ರೀಯ ಯೋಜನೆಯಾಗಬೇಕು: ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು



ಕೊಪ್ಪಳ ಜೂ.26

ಕೇಂದ್ರ ಸರ್ಕಾರವು ಈಗಾಗಲೇ ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದ ನಡುವಿನ ಕೆನ್-ಬೆತ್ವಾ' ಯೋಜನೆ ಹಾಗೂ ರಾಜಸ್ಥಾನ ಮತ್ತು ಮಧ್ಯಪ್ರದೇಶದ ನಡುವಿನ ಪಾರ್ವತಿ-ಕಾಳಿಸಿಂಧು-ಚಂಬಲ್' ನದಿ ಜೋಡಣೆ ಯೋಜನೆಗಳನ್ನು ಯಶಸ್ವಿಯಾಗಿ ಕೈಗೆತ್ತಿಕೊಂಡಿದೆ. ಇದೇ ಮಾದರಿಯಲ್ಲಿ, ದಕ್ಷಿಣ ಭಾರತದ ಪ್ರಮುಖ ನದಿಗಳಾದ ಗೋದಾವರಿ ಮತ್ತು ಕಾವೇರಿ ನದಿಗಳ ಜೋಡಣೆ ಯೋಜನೆಯನ್ನು ಕೇಂದ್ರ ಸರ್ಕಾರವು ರಾಷ್ಟ್ರೀಯ ಯೋಜನೆ' ಯಾಗಿ ಪರಿಗಣಿಸಿ ಅನುಷ್ಠಾನಕ್ಕೆ ತರಬೇಕು ಎಂದು ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಗುರುವಾರದಂದು ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆ ಹಾಗೂ ತುಂಗಭದ್ರಾ ಮಂಡಳಿಯ ಸಹಯೋಗದಲ್ಲಿ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ತುಂಗಭದ್ರಾ ಜಲಾಶಯಕ್ಕೆ ನೂತನವಾಗಿ ಅಳವಡಿಸಲಾದ 33 ಸ್ಪಿಲ್‌ವೇ ಗೇಟುಗಳ ಲೋಕಾರ್ಪಣೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದೇಶದ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ನದಿಗಳ ಜೋಡಣೆ ಅತ್ಯಂತ ತುರ್ತಾಗಿ ಆಗಬೇಕಿದೆ. ನದಿ ಜೋಡಣೆ ಪ್ರಕ್ರಿಯೆಯಲ್ಲಿ ಯಾವುದೇ ರಾಜ್ಯಕ್ಕೆ ಅನ್ಯಾಯವಾಗಬಾರದು ಎಂದು ಸ್ಪಷ್ಟಪಡಿಸಿದ ನಾಯ್ಡು ಅವರು, ಈ ಯೋಜನೆಯನ್ನು ಜಾರಿಗೊಳಿಸುವಾಗ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸಬೇಕು ಎಂದು ಒತ್ತಿ ಹೇಳಿದರು. ಈ ಮೂರೂ ರಾಜ್ಯಗಳ ಹಕ್ಕುಗಳಿಗೆ ಧಕ್ಕೆ ಬಾರದಂತೆ ಸೂಕ್ತ ಕ್ರಿಯಾ ಯೋಜನೆಯನ್ನು ರೂಪಿಸುವುದರ ಜೊತೆಗೆ, ಅಗತ್ಯ ಬಿದ್ದರೆ ತಮಿಳುನಾಡಿಗೂ ನೀರನ್ನು ಕೊಂಡೊಯ್ಯುವ ವ್ಯವಸ್ಥೆ ಮಾಡಬೇಕು ಎಂದರು.

ಈ ಹಿಂದೆ 1983 ರಲ್ಲಿ ಎನ್.ಟಿ. ರಾಮರಾವ್ ಅವರ ನಾಯಕತ್ವದಲ್ಲಿ ಅವಿಭಜಿತ ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳು ಒಟ್ಟಾಗಿ ಸೇರಿ ಚೆನ್ನೈನ ಕುಡಿಯುವ ನೀರಿಗಾಗಿ 15 ಟಿಎಂಸಿ ನೀರನ್ನು ಒದಗಿಸಿದ್ದ ಐತಿಹಾಸಿಕ ಒಕ್ಕೂಟ ವ್ಯವಸ್ಥೆಯ ಉದಾಹರಣೆಯನ್ನು ಅವರು ಈ ಸಂದರ್ಭದಲ್ಲಿ ಸ್ಮರಿಸಿದರು.

ಪ್ರಸ್ತುತ ದೇಶದಲ್ಲಿ ಒಂದು ಕಡೆ ಭೀಕರ ಪ್ರವಾಹ ಬಂದರೆ, ಮತ್ತೊಂದು ಕಡೆ ತೀವ್ರ ಬರಗಾಲವಿರುತ್ತದೆ. ಈ ವರ್ಷ 'ಎಲ್ ನಿನೋ' ಪ್ರಭಾವದಿಂದಾಗಿ ತುಂಗಭದ್ರಾ ಹಾಗೂ ಆಲಮಟ್ಟಿ ಜಲಾಶಯಗಳಿಗೂ ನಿರೀಕ್ಷಿತ ಪ್ರಮಾಣದಲ್ಲಿ ನೀರಿನ ಒಳಹರಿವು ಬಂದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ದೇಶದ ಎಲ್ಲಾ ನದಿಗಳನ್ನು ಜೋಡಿಸುವುದೊಂದೇ ಇರುವ ಏಕೈಕ ಮಾರ್ಗವಾಗಿದೆ. ಹೆಚ್ಚುವರಿ ನೀರಿರುವ ನದಿಗಳಿಂದ ಕೊರತೆಯಿರುವ ನದಿಗಳಿಗೆ ನೀರನ್ನು ಹರಿಸುವ ಮೂಲಕ ಬರಗಾಲವನ್ನು ಸಮರ್ಥವಾಗಿ ಎದುರಿಸಬಹುದು. ಇದರಿಂದ ರಾಜ್ಯಗಳ ನಡುವಿನ, ಜಿಲ್ಲೆಗಳ ನಡುವಿನ ಹಾಗೂ ರೈತರ ನಡುವಿನ ನೀರಿನ ಸಂಘರ್ಷಗಳನ್ನು ಸಂಪೂರ್ಣವಾಗಿ ತಡೆಯಬಹುದು ಎಂದು ಚಂದ್ರಬಾಬು ನಾಯ್ಡು ಅಭಿಪ್ರಾಯಪಟ್ಟರು.

ಈ ಸಂದರ್ಭ ಕಾರ್ಯಕ್ರಮದಲ್ಲಿ ಕೇಂದ್ರ ಜಲಶಕ್ತಿ ಸಚಿವರಾದ ಸಿ.ಆರ್. ಪಾಟೀಲ್, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ತೆಲಂಗಾಣ ಮುಖ್ಯಮಂತ್ರಿ ಎ.ರೇವಂತರೆಡ್ಡಿ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಬಸವರಾಜ ಎಸ್ ಹೊರಟ್ಟಿ, ಆಂಧ್ರಪ್ರದೇಶದ ಜಲಸಂಪನ್ಮೂಲ ಇಲಾಖೆ ಮಾನ್ಯ ಸಚಿವರಾದ ಡಾ. ನಿಮ್ಮಲ ರಾಮನಾಯ್ಡು, ಆಂಧ್ರಪ್ರದೇಶದ ಹಣಕಾಸು, ಯೋಜನೆ, ವಾಣಿಜ್ಯ ತೆರಿಗೆ ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆ ಸಚಿವರಾದ ಪಯ್ಯವುಲ ಕೇಶವ್, ತೆಲಂಗಾಣದ ನೀರಾವರಿ ಇಲಾಖೆ ಹಾಗೂ ಸಿಎಡಿ ಸಚಿವರಾದ ಎನ್.ಉತ್ತಮ್ ಕುಮಾರ ರೆಡ್ಡಿ, ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ್, ಸಂಸದರಾದ ಕೆ. ರಾಜಶೇಖರ ಹಿಟ್ನಾಳ್, ಬಳ್ಳಾರಿ ಸಂಸದರಾದ ಈ. ತುಕಾರಾಮ್, ದಾವಣಗೆರೆ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಕೊಪ್ಪಳ ಜಿಲ್ಲೆಯ ವ್ಯಾಪ್ತಿಗೆ ಬರುವ ವಿಧಾನಸಭೆ ಶಾಸಕರುಗಳಾದ ಬಸವರಾಜ ರಾಯರೆಡ್ಡಿ, ಶಿವರಾಜ ಎಸ್. ತಂಗಡಗಿ, ಮುನಿರಾಬಾದ್ ತುಂಗಾಭದ್ರಾ ಯೋಜನೆ (ಕಾಡಾ) ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹಸನ್ ಸಾಬ್ ನಬಿಸಾಬ್ ದೋಟಿಹಾಳ, ಕೊಪ್ಪಳ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ಹೆಚ್.ಆರ್. ಗವಿಯಪ್ಪ, ಎಂ.ಪಿ. ಲತಾ ಮಲ್ಲಿಕಾರ್ಜುನ, ವಿಧಾನಪರಿಷತ್ ಶಾಸಕರುಗಳಾದ ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ, ಬಸನಗೌಡ ಬಾದರ್ಲಿ ಹಾಗೂ ಎನ್.ಎಸ್. ಬೋಸರಾಜು, ಗದಗ ಜಿಲ್ಲೆಯ ವ್ಯಾಪ್ತಿಗೆ ಬರುವ ವಿಧಾನಸಭೆ ಶಾಸಕರುಗಳಾದ ಹೆಚ್.ಕೆ. ಪಾಟೀಲ, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪೂರ, ಸೇರಿದಂತೆ ವಿವಿಧ ಜನಪ್ರತಿನಿಧಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.

ಕನಕದಾಸರ ವೈಚಾರಿಕ ಸಾಹಿತ್ಯ ಸಮಾಜ ಪರಿವರ್ತನೆಗೆ ಪ್ರೇರಣೆ: ಅರುಣಕುಮಾರ ಎಂ.ವೈ.ಪಾಟೀಲ



ಕಲಬುರಗಿ,ಜೂ.25-

ನೃತ್ಯ, ಸಂಗೀತ ಹಾಗೂ ನಾಟಕಗಳು ಅತ್ಯಂತ ಪರಿಣಾಮಕಾರಿ ಮಾಧ್ಯಮಗಳಾಗಿದ್ದು, ಮುತ್ತು ಬಂದಿದೆ ಕೇರಿಗೆ ಸಂಗೀತ ನೃತ್ಯ ರೂಪಕ ಜನರ ಮೇಲೆ ಉತ್ತಮ ಪ್ರಭಾವ ಬೀರುವಂತಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಎಂ.ವೈ.ಪಾಟೀಲ ಹೇಳಿದರು.

ನಗರದ ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ ಹಾಗೂ ಕಲಬುರಗಿ ಆರ್ಟ್ ಥಿಯೇಟರ್‌ಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಮುತ್ತು ಬಂದಿದೆ ಕೇರಿಗೆ ಸಂತಕವಿ ಕನಕದಾಸರ ಕುರಿತ ಸಂಗೀತ ನೃತ್ಯ ರೂಪಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನಕದಾಸರ ವೈಚಾರಿಕ ಸಾಹಿತ್ಯ ಸಮಾಜದಲ್ಲಿ ಪರಿವರ್ತನೆ ತರಬಲ್ಲ ಶಕ್ತಿಯನ್ನು ಹೊಂದಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂವಿಧಾನ ರಕ್ಷಣಾ ಸಮಿತಿ ಜಿಲ್ಲಾ ಸಂಚಾಲಕ ಸುಭಾಷ್ ರಾಠೋಡ್ ಮಾತನಾಡಿ, ಭಾಷೆ ಹಾಗೂ ತತ್ವದ ದೃಷ್ಟಿಯಿಂದ ಕನಕದಾಸರು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದರು. 12ನೇ ಶತಮಾನದ ವಚನಕಾರರ ನಂತರ ಜಾತಿ ಮತ್ತು ವರ್ಗ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದ ಪ್ರಮುಖ ಚಿಂತಕರಾಗಿ ಕನಕದಾಸರನ್ನು ಅವರು ಬಣ್ಣಿಸಿದರು.

ಮುಖ್ಯ ಅತಿಥಿಯಾಗಿ ತಿಪ್ಪಣ್ಣಪ್ಪ ಕಮಕನೂರ ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಶಿಂಧೆ, ಕಾರ್ಯಕ್ರಮದ ಸಂಚಾಲಕ ಸುನಿಲ್ ಮಾನಪಡೆ, ಮಹಾಂತೇಶ ಕೌಲಗಿ, ಬೈಲಪ್ಪ ನೆಲೋಗಿ, ಚಂದ್ರಿಕಾ ಪರಮೇಶ್ವರ, ವಿಜಯಕುಮಾರ ಸೋನಾರೆ, ಬಿ.ಎಚ್. ನಿರಗುಡಿ, ಕುಪೇಂದ್ರ ಬರಗಾಲಿ, ವಿಜಯಲಕ್ಷ್ಮೀ ಮುಗಳಿ, ಮೈಲಾರಿ ದೊಡ್ಡಮನಿ, ಪರಮೇಶ್ವರ ಆಲಗೋಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ರೂಪಕಕ್ಕೆ ಆರ್ಥಿಕ ನೆರವು ನೀಡಿದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಯೋಜನೆಯ ರಾಜ್ಯಾಧ್ಯಕ್ಷ ಎಚ್.ಎಂ. ರೇವಣ್ಣ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಡಾ. ಕಪಿಲ್ ಚಕ್ರವರ್ತಿ ಕಾರ್ಯಕ್ರಮ ನಿರೂಪಿಸಿದರು.

ಬಳ್ಳಾರಿ: ಸಂಕಷ್ಟದಲ್ಲಿರುವ ಮಹಿಳೆಯರಿಗೆ ಆಸರೆಯಾದ ಸಖಿ ಒನ್ ಸ್ಟಾಪ್ ಸೆಂಟರ್



ಬಳ್ಳಾರಿ,ಜೂ.26-

ಮಹಿಳೆಯರ ಸುರಕ್ಷತೆ, ಗೌರವ ಮತ್ತು ಸಬಲೀಕರಣವನ್ನು ಉತ್ತೇಜಿಸುವ ಉದ್ದೇಶದಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಖಿ ಒನ್ ಸ್ಟಾಪ್ ಸೆಂಟರ್ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಸಮಗ್ರ ಬೆಂಬಲ ಮತ್ತು ರಕ್ಷಣಾ ಸೇವೆಗಳನ್ನು ಒದಗಿಸುವ ಮೂಲಕ ಪ್ರಮುಖ ಆಸರೆಯಾಗಿದೆ.

ಮಹಿಳೆಯರು ಯಾವುದೇ ರೀತಿಯ ದೈಹಿಕ, ಮಾನಸಿಕ, ಭಾವನಾತ್ಮಕ ಹಾಗೂ ಲೈಂಗಿಕ ಹಿಂಸೆಗೆ ಒಳಗಾದ ಸಂದರ್ಭದಲ್ಲಿ ತಕ್ಷಣದ ನೆರವು ಪಡೆಯಲು ಸಖಿ ಕೇಂದ್ರವು ಪ್ರಮುಖ ವೇದಿಕೆಯಾಗಿದೆ. ನೊಂದ ಮಹಿಳೆ, ಹಲವು ಸಮಸ್ಯೆ, ಒಂದು ಸೂರು, ಹಲವು ಸೇವೆ ಎಂಬ ಧ್ಯೇಯದೊಂದಿಗೆ ಈ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.

ಒಂದೇ ಸೂರಿನಡಿ ವಿವಿಧ ಸೇವೆಗಳು:

ಸಖಿ ಕೇಂದ್ರದಲ್ಲಿ ಸಂಕಷ್ಟಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸ್ಥಳದಲ್ಲಿ ಅಗತ್ಯವಿರುವ ಎಲ್ಲಾ ನೆರವುಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಅದರಲ್ಲಿ ಉಚಿತ ಆಪ್ತಸಮಾಲೋಚನೆ ಮತ್ತು ಕಾನೂನು ಸಲಹೆ, ತುರ್ತು ವೈದ್ಯಕೀಯ ನೆರವು ಮತ್ತು ಪೊಲೀಸ್ ಇಲಾಖೆಯೊಂದಿಗೆ ಸಮನ್ವಯ, ತಾತ್ಕಾಲಿಕ ಆಶ್ರಯ ಹಾಗೂ ನ್ಯಾಯಾಲಯದ ಪ್ರಕ್ರಿಯೆಗಳಿಗೆ ಸೂಕ್ತ ಮಾರ್ಗದರ್ಶನ ಪ್ರಮುಖವಾಗಿವೆ.

ಮಹಿಳೆಯರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ, ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸಿ ಸಮಾಜದ ಮುಖ್ಯವಾಹಿನಿಗೆ ಮರಳಲು ಅಗತ್ಯ ಸಹಕಾರವನ್ನು ಕೇಂದ್ರವು ನೀಡುತ್ತಾ ಬಂದಿದೆ.

ಇಲಾಖೆಗಳ ಸಮನ್ವಯದೊಂದಿಗೆ ರಕ್ಷಣೆ: ಕೌಟುಂಬಿಕ ಹಿಂಸೆ, ವರದಕ್ಷಿಣೆ ಕಿರುಕುಳ, ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹ, ಮಾನವ ಕಳ್ಳಸಾಗಣೆ ಹಾಗೂ ಇತರೆ ಮಹಿಳಾ ಮತ್ತು ಮಕ್ಕಳ ಹಕ್ಕುಗಳಿಗೆ ಸಂಬಧಿಸಿದ ಪ್ರಕರಣಗಳಲ್ಲಿ ಕೇಂದ್ರವು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಪೊಲೀಸ್ ಅಧಿಕಾರಿಗಳು, ಆರೋಗ್ಯ ಇಲಾಖೆ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಹಯೋಗ ದೊಂದಿಗೆ ಸಂತ್ರಸ್ತರಿಗೆ ಸೂಕ್ತ ರಕ್ಷಣೆ ಮತ್ತು ನ್ಯಾಯ ದೊರಕಿಸಿಕೊಡ ಲಾಗುತ್ತಿದೆ.

ವ್ಯಾಪಕ ಜಾಗೃತಿ ಕಾರ್ಯಕ್ರಮಗಳು:

ಕೇವಲ ನೆರವು ನೀಡುವುದಷ್ಟೇ ಅಲ್ಲದೆ, ಸಾರ್ವಜನಿಕ ಸ್ಥಳಗಳು, ಗ್ರಾಮ ಪಂಚಾಯಿತಿಗಳು, ಶಾಲೆ-ಕಾಲೇಜುಗಳು ಹಾಗೂ ಕೈಗಾರಿಕಾ ಸಂಸ್ಥೆಗಳಲ್ಲಿ ಮಹಿಳಾ ಸುರಕ್ಷತೆ, ಲಿಂಗ ಸಮಾನತೆ, ಸೈಬರ್ ಸುರಕ್ಷತೆ, ಬಾಲ್ಯ ವಿವಾಹ ತಡೆ, ಪೋಕ್ಸೋ ಕಾಯ್ದೆ ಮತ್ತು ಮಹಿಳಾ ಸಬಲೀಕರಣದ ಕುರಿತು ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಸಖಿ ಕೇಂದ್ರವು ಜಿಲ್ಲೆಯಲ್ಲಿ ಇದುವರೆಗೆ ಒಟ್ಟು 3,667 ಫಲಾನುಭವಿಗಳಿಗೆ ಯಶಸ್ವಿಯಾಗಿ ಸೇವೆಗಳನ್ನು ಒದಗಿಸಿದೆ.

ಒದಗಿಸಲಾದ ಸೇವೆಗಳು ಮತ್ತು ಫಲಾನುಭವಿಗಳ ಸಂಖ್ಯೆ: ಮಾನಸಿಕ-ಸಾಮಾಜಿಕ ಆಪ್ತಸಮಾಲೋಚನೆ: 998 ಕಾನೂನು ಸಮಾಲೋಚನೆ: 952

ಪೊಲೀಸ್ ಸಹಾಯ: 730 ವೈದ್ಯಕೀಯ ನೆರವು: 704 ತಾತ್ಕಾಲಿಕ ಆಶ್ರಯ ಸೌಲಭ್ಯ: 259 ಯಾವುದೇ ಮಹಿಳೆ ಹಿಂಸೆ, ಕಿರುಕುಳ ಅಥವಾ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದರೆ, ಅದನ್ನು ಸಹಿಸಿಕೊಳ್ಳದೆ ಧೈರ್ಯದಿಂದ ಮುಂದೆ ಬಂದು ಸಖಿ ಕೇಂದ್ರದ ನೆರವು ಪಡೆಯಬಹುದು. ಇಲ್ಲಿ ನೀಡಲಾಗುವ ಎಲ್ಲಾ ಸೇವೆಗಳು ಸಂಪೂರ್ಣ ಉಚಿತವಾಗಿದ್ದು, ಸಂತ್ರಸ್ತರ ಗೌಪ್ಯತೆಯನ್ನು ಕಟ್ಟುನಿಟ್ಟಾಗಿ ಕಾಪಾಡಲಾಗುತ್ತದೆ.

ಸಂಪರ್ಕಿಸಬೇಕಾದ ವಿಳಾಸ:

ಸಖಿ ಒನ್ ಸ್ಟಾಪ್ ಸೆಂಟರ್ ಶಾಂತಿಧಾಮ ಆವರಣ, ಕಂಟೋನ್ಮೆಂಟ್, ಬಳ್ಳಾರಿ. ಮಾಹಿತಿಗಾಗಿ ಉಚಿತ ಮಹಿಳಾ ಸಹಾಯವಾಣಿ ಸಂಖ್ಯೆ 181 ಗೆ ಕರೆ ಮಾಡಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ.ಎಂ ಅವರು ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಸೌಹಾರ್ದ, ಮಾನವೀಯ ಮೌಲ್ಯಗಳ ಪ್ರತೀಕ: ರಾಜೇಂದ್ರ ಎಂ.ಕೊರಬಾ



ಆಳಂದ,ಜೂ.26-

ಬಸವಣ್ಣನವರು ಕಟ್ಟಿದ ಕಲ್ಯಾಣ ರಾಜ್ಯದ ಮಾದರಿ ಇಂದಿಗೂ ಜಗತ್ತಿನ ಮೆಚ್ಚುಗೆಗೆ ಪಾತ್ರವಾಗಿದ್ದು, ಕಾಯಕ, ದಾಸೋಹ, ಸಮಾನತೆ ಹಾಗೂ ಬಂಧುತ್ವದ ಮೌಲ್ಯಗಳ ಮೂಲಕ ಅವರು ನಿರ್ಮಿಸಿದ ಮಾನವೀಯ ನಾಗರಿಕತೆ ಇಂದಿನ ಯುದ್ಧ ಮತ್ತು ಅಶಾಂತಿಗ್ರಸ್ತ ವಿಶ್ವಕ್ಕೆ ದಾರಿದೀಪವಾಗಿದೆ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಪ್ರಥಮ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಮಹಾಸ್ವಾಮಿಗಳು ಪ್ರತಿಪಾದಿಸಿದರು.

ಪಟ್ಟಣದಲ್ಲಿ ಬಸವ ಜಯಂತಿ ನಿಮಿತ್ತ ಆಯೋಜಿಸಲಾಗಿದ್ದ ಬಸವ ಸಂಗಮ ಶೋಭಾಯಾತ್ರೆ ಹಾಗೂ ಶ್ರೀರಾಮ್ ಮಾರುಕಟ್ಟೆ ಮೈದಾನದಲ್ಲಿ ನಡೆದ ಬೃಹತ್ ಸಮಾರಂಭದಲ್ಲಿ ಮಾತನಾಡಿದ ಅವರು, ಬಸವಾದಿ ಶರಣರ ವಚನ ಸಾಹಿತ್ಯ ಕೇವಲ ಧಾರ್ಮಿಕ ಪಠ್ಯವಲ್ಲ, ಅದು ಮಾನವ ಜನಾಂಗದ ಅಂತರಂಗ ಶುದ್ಧಿಗೆ ಮಾರ್ಗದರ್ಶಿಯಾಗಿದೆ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಪ್ರದೇಶದ ಭೌತಿಕ ಅಭಿವೃದ್ಧಿಗೆ ಸಂವಿಧಾನದ 371(ಜೆ) ವಿಧಿ ನೆರವಾಗಿದ್ದು, ಸ್ವಾತಂತ್ರ್ಯ ಹೋರಾಟದಲ್ಲಿ ಎ.ವಿ. ಪಾಟೀಲ್, ಭೀಮಣ್ಣ ಖಂಡ್ರೆ ಮೊದಲಾದ ಮಹನೀಯರ ತ್ಯಾಗ-ಬಲಿದಾನ ಈ ನೆಲಕ್ಕೆ ಸಿಕ್ಕ ಅಮೂಲ್ಯ ಕಾಣಿಕೆಯಾಗಿದೆ ಎಂದು ಸ್ಮರಿಸಿದ ಮಹಾಸ್ವಾಮಿಗಳು, ಭೌತಿಕ ಪ್ರಗತಿಗೆ 371(ಜೆ) ಕಲಂ ಆಧಾರಸ್ತಂಭವಾದರೆ, ಅಂತರಂಗದ ಅಭಿವೃದ್ಧಿಗೆ 770 ಶರಣರ ವಚನ ಸಾಹಿತ್ಯವೇ ಆತ್ಮದ ಕಲಂ ಎಂದು ಅರ್ಥಪೂರ್ಣವಾಗಿ ಪ್ರತಿಪಾದಿಸಿದರು. ಅಜ್ಞಾನದಿಂದ ಸುಜ್ಞಾನದತ್ತ, ಮೌಢ್ಯದಿಂದ ವೈಚಾರಿಕತೆಯತ್ತ ಸಾಗುವ ಪ್ರಕ್ರಿಯೆಯೇ ನಿಜವಾದ ಅಂತರಂಗ ಕ್ರಾಂತಿ ಎಂದ ಅವರು, ಬಸವಣ್ಣನವರು ಭೌತಿಕ ಬದುಕಿನ ಜೊತೆಗೆ ಆತ್ಮಾವಲೋಕನಕ್ಕೂ ಮಹತ್ವ ನೀಡಿದ್ದು, ಅದಕ್ಕಾಗಿಯೇ ವಚನ ಧರ್ಮವನ್ನು ಜನಸಾಮಾನ್ಯರ ಭಾಷೆಯಲ್ಲಿ ನೀಡಿದ್ದಾರೆ ಎಂದು ಹೇಳಿದರು.

ಜಗತ್ತಿನ ಅನೇಕ ರಾಷ್ಟ್ರಗಳು ಬಸವ ತತ್ವಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಿರುವ ಈ ಸಂದರ್ಭದಲ್ಲಿ ಬಸವಣ್ಣನವರು ನಿಜವಾದ ವಿಶ್ವನಾಯಕ ಎಂದು ಬಣ್ಣಿಸಿದ ಅವರು, ಒಟ್ಟಾಗಿ ಬದುಕುವ ಪಾಠವನ್ನು ಬಸವಣ್ಣ ಶತಮಾನಗಳ ಹಿಂದೆಯೇ ಜಗತ್ತಿಗೆ ಕಲಿಸಿದ್ದಾರೆ ಎಂದರು.

ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಸಕಾಲದಲ್ಲಿ ಬಸವ ತತ್ವ ಸಮರ್ಪಕವಾಗಿ ತಲುಪಿದ್ದರೆ, ಬುದ್ಧ ತತ್ವ ಮತ್ತು ಬಸವ ತತ್ವ ಒಂದಾಗಿ ಭಾರತ ಇನ್ನಷ್ಟು ಶಕ್ತಿಶಾಲಿಯಾಗುತ್ತಿತ್ತು. ಇನ್ನೂ ಕಾಲ ಮಿಂಚಿಲ್ಲ. ''ಬುದ್ಧ-ಬಸವ-ಭಾರತ'' ಸಮನ್ವಯದ ಮೂಲಕ ಬಲಿಷ್ಠ ಭಾರತ ನಿರ್ಮಿಸಲು ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಭಾರತದ ಮೂಲ ಕೃಷಿಕನ ಜೀವನ ಹಸನಾಗಿಸಲು ಕಾಯಕ-ದಾಸೋಹ ತತ್ವವನ್ನು ಕೇವಲ ಆಚರಣೆಗೆ ಸೀಮಿತಗೊಳಿಸದೆ ದೈನಂದಿನ ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕಾಗಿದೆ. ಸರ್ಕಾರ ಭೌತಿಕ ಅಭಿವೃದ್ಧಿಗೆ ಶ್ರಮಿಸುವಂತೆ ಸಮಾಜವೂ ತನ್ನ ಮನಸ್ಸಿನ ಅಭಿವೃದ್ಧಿಗೆ ಶ್ರಮಿಸಬೇಕಾಗಿದೆ ಎಂದು ತಿಳಿಸಿದರು.

ಕಾರವಾರದ ಅತ್ತಿವೇರಿ ಬಸವಧಾಮದ ಬಸವೇಶ್ವರಿ ಮಾತಾಜಿ ಮಾತನಾಡಿ, ಬಸವಣ್ಣನವರು ತಮ್ಮ ಶ್ರೀಮಂತಿಕೆಯನ್ನು ಜನಸಾಮಾನ್ಯರ, ದೀನ ದಲಿತರ ಸಾಮಾಜಿಕ ನ್ಯಾಯಕ್ಕಾಗಿ ಬಳಸಿದರು. ದುಶ್ಚಟಗಳಿಂದ ದೂರವಿದ್ದು ಇಷ್ಟಲಿಂಗ, ಕಾಯಕ ಹಾಗೂ ವಚನ ಸಾಹಿತ್ಯದ ಮಾರ್ಗದಲ್ಲಿ ಸಾಗಬೇಕು ಎಂದರು. ಪಡಸಾವಳಿ ಡೋಣಗಾಂವ ಮಠದ ಡಾ. ಶಂಭುಲಿಂಗ ಶಿವಾಚಾರ್ಯರು, ಕಡಗಂಚಿ ಕಟ್ಟಿಮಠದ ಶ್ರೀ ವೀರಭದ್ರ ಶಿವಾಚಾರ್ಯರು ಹಾಗೂ ಗೋಳಾ ಮಠದ ಶ್ರೀಗಳು ಬಸವ ತತ್ವಗಳ ಮಹತ್ವವನ್ನು ವಿವರಿಸಿದರು. ವೇದಿಕೆಯಲ್ಲಿ ಹೋದಲೂರಿನ ಋಷಭೇಂದ್ರ ಶ್ರೀ, ಮಾಡಿಯಾಳ, ನಿಂಬರಗಾ, ಬಂಗರಗಾ, ಮರೋಣ ಸೇರಿದಂತೆ ವಿವಿಧ ಮಠಗಳ ಶ್ರೀಗಳು ಉಪಸ್ಥಿತರಿದ್ದರು.

ಉತ್ಸವ ಸಮಿತಿ ಅಧ್ಯಕ್ಷ ಆನಂದ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ವೈಜನಾಥ ಝಳಕಿ ಹಾಗೂ ಸೋಮಶೇಖರ ಮುಲಗೆ ನಿರೂಪಿಸಿದರು. ಶರಣು ಕುಮಸಿ ವಂದಿಸಿದರು.

ಈ ಮೊದಲು ನಡೆದ ಬಸವ ಸಂಗಮ ಶೋಭಾಯಾತ್ರೆ ತುಂತುರು ಮಳೆಯ ನಡುವೆಯೂ ಅಭೂತಪೂರ್ವ ವೈಭವದಿಂದ ನೆರವೇರಿತು. ಲಿಂಗಾಯತ ಭವನದಲ್ಲಿರುವ ಶ್ರೀ ಬಸವೇಶ್ವರರ ಪ್ರತಿಮೆಗೆ ಪೂಜೆ ಸಲ್ಲಿಸಿ ಜಿಡಗಾ ಮಠದ ಷಡಕ್ಷರಿ ಶಿವಯೋಗಿ ಡಾ. ಮುರುಘರಾಜೇಂದ್ರ ಮಹಾಸ್ವಾಮಿಗಳು ಹಾಗೂ ಕೂಡಲಸಂಗಮ ಪೀಠದ ಜಗದ್ಗುರು ಬಸವ ಜಯಮೃತ್ಯುಂಜಯ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಶೋಭಾಯಾತ್ರೆಗೆ ಚಾಲನೆ ನೀಡಲಾಯಿತು.

ಬಸ್ ನಿಲ್ದಾಣ ಮುಖ್ಯರಸ್ತೆ ಮಾರ್ಗವಾಗಿ ಶ್ರೀರಾಮ್ ಮಾರುಕಟ್ಟೆ ಮೈದಾನದವರೆಗೆ ಸಾಗಿದ ಮೆರವಣಿಗೆಯಲ್ಲಿ ಕುಂಭ-ಕಳಸ ಹೊತ್ತ ಮಹಿಳೆಯರು, ಜಾನಪದ ನೃತ್ಯ ತಂಡಗಳು, ಡೊಳ್ಳು ಕುಣಿತ, ಮಂಗಳ ವಾದ್ಯಗಳು ವಿಶೇಷ ಆಕರ್ಷಣೆಯಾಗಿದ್ದವು. ಬೀದಿಬದಿಯಲ್ಲಿ ನಿಂತು ಜನರು ಹೂಮಳೆ ಸುರಿಸಿ ಬಸವಣ್ಣನ ಜಯಘೋಷ ಮೊಳಗಿಸಿದರು.

ಮಾದನಹಿಪ್ಪರಗಿ ಮಠದ ಅಭಿನವ ಶಿವಲಿಂಗ ಮಹಾಸ್ವಾಮಿಗಳು, ನರೋಣ ಗುರುಮಾಂತ ಮಹಾಸ್ವಾಮಿಗಳು, ಸಿದ್ದೇಶ್ವರ ಶಿವಾಚಾರ್ಯರು ಸೇರಿದಂತೆ ಅನೇಕ ಮಠಾಧೀಶರು ಹಾಗೂ ಗಣ್ಯರು ಭಾಗವಹಿಸಿದ್ದರು.

ಮಾಜಿ ಶಾಸಕ ಸುಭಾಷ್ ಗುತ್ತೇದಾರ್, ಕೆಎಂಎಫ್ ಅಧ್ಯಕ್ಷ ಆರ್.ಕೆ. ಪಾಟೀಲ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಹರ್ಷಾನಂದ ಗುತ್ತೇದಾರ್, ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಅರುಣಕುಮಾರ ಪಾಟೀಲ ಸೇರಿದಂತೆ ಹಲವಾರು ಮುಖಂಡರು ಉಪಸ್ಥಿತರಿದ್ದರು.

ಪ್ರಚಾರ ಸಮಿತಿ ಅಧ್ಯಕ್ಷ ನಾಗರಾಜು ಶೇಗಜಿ, ನ್ಯಾಯವಾದಿ ಬಾಬಾಸಾಹೇಬ್ ಪಾಟೀಲ್, ಶ್ರೀಶೈಲ್ ಖಜೂರಿ, ಮಹೇಶ ಗೌಳಿ, ಮಲ್ಲಪ್ಪ ಹತ್ತರಕ್ಕಿ, ಗೌರಿ ಚಿಟ್ಕೋಟಿ, ಅಶೋಕ ಹತರಕಿ ತಂಬಕವಾಡಿ, ಗುರುಶರಣ ಪಾಟೀಲ ಕೊರಳ್ಳಿ, ಮಲ್ಲಿಕಾರ್ಜುನ ಕಂದಗುಳೆ, ಮಲ್ಲಿಕಾರ್ಜುನ ಸಾರವಾಡ, ದತ್ತ, ರಾಜ್ ಗುತ್ತೇದಾರ್ ರೇವಣಸಿದ್ದಪ್ಪ ನಾಗೂರೆ, ಲಿಂಗರಾಜ್ ಪಾಟೀಲ್ ಕೆರ್ ಮಹೇಶ ಗೌಳಿ, ಬಸವರಾಜ ಕೆರೂರ, ಉದ್ಯಮಿ ಶ್ರೀಶೈಲ ಸುತಾರ ಮುನ್ನೊಳ್ಳಿ, ರಾಜಶೇಖರ ಯಂಕಚಚಿ, ಮಲ್ಲಿಕಾರ್ಜುನ ತಡಕಲ್ ಸೇರಿದಂತೆ ಅನೇಕ ಗಣ್ಯರು, ಕಾರ್ಯಕರ್ತರು ಮತ್ತು ಅಭಿಮಾನಿಗಳು, ಮಹಿಳೆಯರು ಭಾಗವಹಿಸಿದ್ದರು.

ಒಂದನೇಯ ಪುಟದಿಂದ

ಸ್ಥಳೀಯ ಕಲಾವಿದರ ಸನ್ಮಾನಕ್ಕೆ ನಾಳೆ ಪಿಜಿಕೆ ರಂಗ ಪುರಸ್ಕಾರ ಪ್ರದಾನ

ಶಿವಕುಮಾರಿ ತಾಯಣ್ಣ ಯರಗೇರಗೆ ಗೌರವ ರಂಗಗೀತೆ-ಜಾನಪದ ಗಾಯನಕ್ಕೂ ವೇದಿಕೆ

ಲಿದ್ದಾರೆ. ಇದೇ ಸಂದರ್ಭದಲ್ಲಿ ಸ್ಥಳೀಯ ಕಲಾವಿದರಿಂದ ರಂಗಗೀತೆಗಳ ಗಾಯನ ಹಾಗೂ ಜಾನಪದ ಗಾಯನ ಕಾರ್ಯಕ್ರಮಗಳು ನಡೆಯಲಿದ್ದು, ಕಲಾಭಿಮಾನಿಗಳಿಗೆ ಸಾಂಸ್ಕೃತಿಕ ಸಂಭ್ರಮ ನೀಡಲಿದೆ ಎಂದು ತಿಳಿಸಲಾಯಿತು.

ಕಾರ್ಯಕ್ರಮವು ಜೂನ್ 27 ರಂದು ಸಂಜೆ 6:30ಕ್ಕೆ ಶ್ರೀ ಶಿವಶರಣ ಮಾದರ ಚನ್ನಯ್ಯ ಗುರುಪೀಠ ಪಬ್ಲಿಕ್ ಗಾರ್ಡನ್‌ನಲ್ಲಿ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ವೀರೇಶ್ ರಂಗಪ್ಪ ಉಪಸ್ಥಿತರಿದ್ದರು.

30ರಂದು 7 ಗಂಟೆ ವಿದ್ಯುತ್ ವ್ಯತ್ಯಯ: ಹಲವು ಪ್ರದೇಶಗಳಿಗೆ ಜೆಸ್ಕಾಂ ಮುನ್ಸೂಚನೆ

ಯರಮರಸ್ ದಂಡು, ಏಗನೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೂ ವಿದ್ಯುತ್ ಸರಬರಾಜು ಸ್ಥಗಿತಗೊಳ್ಳಲಿದೆ.

ಕಾಮಗಾರಿ ಪೂರ್ಣಗೊಂಡ ಬಳಿಕ ವಿದ್ಯುತ್ ಪೂರೈಕೆಯನ್ನು ಮರು ಆರಂಭಿಸಲಾಗುವುದು ಎಂದು ಜೆಸ್ಕಾಂ ತಿಳಿಸಿದ್ದು, ಸಾರ್ವಜನಿಕರು ಮುಂಚಿತವಾಗಿ ಅಗತ್ಯ ವ್ಯವಸ್ಥೆ ಮಾಡಿಕೊಂಡು ಸಹಕರಿಸುವಂತೆ ಮನವಿ ಮಾಡಿದೆ. ಹೆಚ್ಚಿನ ಮಾಹಿತಿಗೆ: 08532-226386 / 08532-231999 ಸಂಪರ್ಕಿಸಬಹುದು.

ಕೆಎಂಎಸ್ ಫೇಸ್ ರೀಡಿಂಗ್ ಹಾಜರಾತಿ ವ್ಯವಸ್ಥೆ ತಕ್ಷಣ ಹಿಂಪಡೆಯಲು ರಾಜ್ಯ ಸರ್ಕಾರಕ್ಕೆ ವಕೀಲ ಅನಿಲ್ ಕುಮಾರ್ ಹೊನ್ನಟಗಿ ಆಗ್ರಹ

ಕಡ್ಡಾಯಗೊಳಿಸಿರುವುದು ಆಡಳಿತಾ ತ್ಮಕವಾಗಿ ಸಮಂಜಸವಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಭಾರತ ಸಂವಿಧಾನದ ಅನು ಚ್ಛೇದ 14 ಮತ್ತು 21ರ ಅಡಿಯಲ್ಲಿ ದೊರೆಯುವ ಸಮಾನತೆ ಹಾಗೂ ಘನತೆಯಿಂದ ಬದುಕುವ ಹಕ್ಕಿಗೆ ಧಕ್ಕೆಯಾಗುವ ರೀತಿಯಲ್ಲಿ ತಾಂತ್ರಿಕ ದೋಷಗಳ ಹೊಣೆಯನ್ನು ಶಿಕ್ಷಕರ ಮೇಲೆ ಹೊರಿಸುವುದು ಕಾನೂನುಬಾಹಿರವಾಗಿದ್ದು, ನೈಸರ್ಗಿಕ ನ್ಯಾಯದ ತತ್ವಗಳಿಗೆ ವಿರುದ್ಧವಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರ ತಕ್ಷಣ ವ್ಯವಸ್ಥೆಯನ್ನು ಹಿಂಪಡೆದು ಹಿಂದಿನ ಹಾಜರಾತಿ ಪದ್ಧತಿಯನ್ನು ಪುನಃ ಜಾರಿಗೊಳಿಸಬೇಕು. ಒಂದು ವೇಳೆ ನ್ಯಾಯಸಮ್ಮತ ಬೇಡಿಕೆಯನ್ನು ನಿರ್ಲಕ್ಷಿಸಿದಲ್ಲಿ ರಾಜ್ಯದ ಶಿಕ್ಷಕರ ಹಿತಾಸಕ್ತಿಗಾಗಿ ರಾಜ್ಯವ್ಯಾಪಿ ಪ್ರತಿಭಟನೆ, ಉಪವಾಸ ಸತ್ಯಾಗ್ರಹ, ಜನಜಾಗೃತಿ ಅಭಿಯಾನ ಹಾಗೂ ಅಗತ್ಯವಿದ್ದಲ್ಲಿ ಕರ್ನಾಟಕ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ () ಸೇರಿದಂತೆ ಎಲ್ಲ ಕಾನೂನುಬದ್ಧ ಹೋರಾಟಗಳನ್ನು ಕೈಗೊಳ್ಳಲಾಗುವುದು ಎಂದು ವಕೀಲ ಅನಿಲ್ ಕುಮಾರ್ ಹೊನ್ನಟಗಿ ಎಚ್ಚರಿಕೆ ನೀಡಿದ್ದಾರೆ.

ಎಂಎಲ್ಸಿ ನಾಗರಾಜ ಯಾದವ್ ಗಬ್ಬೂರಿಗೆ ಭೇಟಿ

ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಬಿ.ಕೆ.ಹರಿಪ್ರಸಾದ ಅವರಿಗೆ ನಾವು ತಳಮಟ್ಟದಲ್ಲಿ ಪಕ್ಷ ಸಂಘಟನೆ ಮಾಡಿ ಮುಂದಿನ 2029 ರ ಲೋಕಸಭೆ ಹಾಗೂ 2028 ರ ರಾಜ್ಯ ವಿಧಾನ ಸಭೆಯಲ್ಲಿ ಚುನಾವಣೆಯಲ್ಲಿ ಅಧಿಕಾರ ಬಂದು ಬಡವರ ದೀನ ದಲಿತ ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ವರ್ಗದ ಸಮಾಸದ ಹಾಗೂ ದೇಶದ ಅಭಿವೃದ್ಧಿಗೆ ಮುನ್ನುಡಿಯಾಗಬೇಕು ಅಲ್ಲದೆ ಪಟ್ಟಣದ ಕೃಷ್ಣ ದೇವಸ್ಥಾನದ ಅಭಿವೃದ್ಧಿಗೆ ಸಹಕಾರ ನೀಡುವ ಭರವಸೆ ನೀಡಿದರು. ಯಾದವ ಸಮಾಜದ ವತಿಯಿಂದ ರಾಜ್ಯ ಕಾಂಗ್ರೆಸ್ ಪಕ್ಷದ ವಕ್ತಾರರು ಹಾಗೂ ವಿಧಾನ ಪರೀಷತ್ತು ಸದಸ್ಯರಾದ ನಾಗರಾಜ ಯಾದವ ಅವರಿಗೆ ಸನ್ಮಾನಿಸ ಗೌರವಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಬೂದೆಯ್ಯಸ್ವಾಮಿ ಸಾಲಿಮಠ, ಯಾದವ ಸಮಾಜದ ಮುಖಂಡರಾದ ಬೂದೆಪ್ಪ ಬಾಗ್ಲಿ, ಸಣ್ಣ ಬೂದೆಪ್ಪ, ಈರೇಶ ಯಾಯಿ, ಪ್ರಭು ಯಾದವ, ಭೀಮಣ್ಣ ಯಾದವ್, ಸಾಯಿಬಣ್ಣ ದಿನ್ನಿ, ಮುದುಕಪ್ಪ ಟೇಲ್ಲರ್, ಬಸವರೆಡ್ಡಿ ಯಾದವ್,ಬಿ ಪಿ ಯಾದವ್ ಹಾಗೂ ಕೊಲ್ಲೂರ್ ಗ್ರಾಮಸ್ಥರು ಇದ್ದರು.

ಆರ್‌ಎಲ್‌ಸಿ ಸಮ್ಮುಖದಲ್ಲಿ ಲಿಖಿತ ಭರವಸೆ;ಧರಣಿ ತಾತ್ಕಾಲಿಕ ಮುಂದೂಡಿಕೆ

ಭರವಸೆ ಈಡೇರದಿದ್ದರೆ ತೀವ್ರ ಹೋರಾಟ-ಎಸ್.ಎಂ.ಶಫಿ ಎಚ್ಚರಿಕೆ

ಮಹತ್ವದ ಸಾಧನೆಯಾಗಿದೆ.ಪ್ರೋತ್ಸಾ ಹಧನ (ಇನ್‌ಸೆಂಟಿವ್) ವಿಷಯವನ್ನು 2 ತಿಂಗಳೊಳಗೆ ಇತ್ಯರ್ಥಪಡಿಸುವ ಭರವಸೆಯನ್ನೂ ಆಡಳಿತ ನೀಡಿದೆ.ಉಳಿದ ಬೇಡಿಕೆಗಳು ಚರ್ಚೆಯ ಹಂತದಲ್ಲಿವೆ.

ಈ ಕುರಿತು ಮಾತನಾಡಿದ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಶಫಿ,ಕಾರ್ಮಿಕರ ಐಕ್ಯತೆ ಮತ್ತು ಶಿಸ್ತುಬದ್ಧ ಹೋರಾಟಕ್ಕೆ ಮಣಿದು ಆಡಳಿತ ಮಂಡಳಿ ಮಾತುಕತೆಗೆ ಬರಬೇಕಾಯಿತು.ಇದು ನಮ್ಮ ಹೋರಾಟದ ಮೊದಲ ಗೆಲುವು ಮಾತ್ರ.ಅಂತಿಮ ಗುರಿ ಇನ್ನೂ ಸಾಧಿಸಬೇಕಿದೆಎಂದು ಹೇಳಿದರು.

ಈ ಸಂದರ್ಭದಲ್ಲಿ ಎಐಟಿಯುಸಿ ಮುಖಂಡ ಸಂಗಯ್ಯಸ್ವಾಮಿ, ಸಿಐಟಿಯು ಮುಖಂಡರಾದ ರಮೇಶ ವೀರಾಪೂರು,ಮೈನುದ್ದೀನ್,ಸಂಘದ ಉಪಾಧ್ಯಕ್ಷ ಚಂದ್ರಶೇಖರ್ ಆನ್ವರಿ,ಕಾರ್ಯದರ್ಶಿಗಳಾದ ಯಂಕೋಬ್ ಮಿಯ್ಯಾಪೂರು,ರಮೇಶ ಬಾಬು,ಜಮದಗ್ನಿ ಕೋಠಾ,ಹನೀಫ್,ನಾಗರಾಜ್ ಡಿ,ಸಿದ್ದಪ್ಪ ಎಂ,ಚಂದ್ರಶೇಖರ್ ನೆಲೋಗಿ,ಕಾರ್ಯಕಾರಿ ಸಮಿತಿ ಸದಸ್ಯರಾದ ಹಾಜಿಬಾಬು,ಮೌನೇಶ, ಗುರುರಾಜ್,ಹನುಮಂತಗೌಡ,ಗುಂಡಪ್ಪಗೌಡ,ಎಂ.ಡಿ.ಮುನಿರುದ್ದೀನ್,ಕುಪ್ಪಣ್ಣ, ಸಿಐಟಿಯು ಮುಖಂಡರಾದ ಫಕೃದ್ದೀನ್,ವೆಂಕಟೇಶ ಗೋರಕಲ್,ಅಲ್ಲಾಭಕ್ಷ,ರಫಿ ಕಸಬಾ ಲಿಂಗಸ್ಗೂರು, ಪೆಂಚಲಯ್ಯ,ನೋವಾ,ಶೇಖ್ ಬಡೆ,ಖಾಜಾ ಟಿನ್ ಮನಿ,ದುರುಗಪ್ಪ,ಸೋಮಣ್ಣ ನಾಯಕ್,ರಾಜ್ ಮಹಮ್ಮದ್,ಹನುಮಂತ್ರಾಯ,ಯಮನೂರು,ಬಸವರಾಜ್ ಹಿರೇನಗನೂರು,ಶಿವು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಿರುಗುಪ್ಪ: ಸೌದಾಗರ್ ಮೊಹಲ್ಲಾ ಹುಸೇನಿ ಸಾಹೇಬ್ ಆಲಂ ಪೀರ ಸವಾರಿಗೆ ಖತಲ್ ರಾತ್ರಿ 9ನೇ ದಿನ ಹರಿದು ಬಂದ ಭಕ್ತರು



ಸಿರುಗುಪ್ಪ - ನಗರ ಸೌದಾಗರ್ ಮೊಹಲ್ಲಾ ಐತಿಹಾಸಿಕ ಮೊಹರಂ ಹುಸೇನಿ ಸಾಹೇಬ್ ಆಲಂ ಪೀರ ದೇವರ ಸವಾರಿಗೆ ಖತಲ್ ರಾತ್ರಿ 9ನೇ ದಿನ ಗುರುವಾರ ರಾತ್ರಿ ನಗರದ ಮೂಲೆ ಮೂಲೆ ಇಂದ ಬಹು ಸಂಖ್ಯೆಯಲ್ಲಿ ಆಗಮಿಸಿದ ಜನಸಾಗರ ತುಂಬಿ ತುಳುಕಿತು ಭಕ್ತರ ಸಂಖ್ಯೆ ಏರಿಕೆಯಾಗಿದ್ದು ದರ್ಶನ ಪಡೆಯಲು ಹರ ಸಾಹಸ ಪಡೆದ ದೃಶ್ಯ ಕಂಡು ಬಂದಿತು ಭಕ್ತಿಯಿಂದ ಕೆಲವರು ಕಾಣಿಕೆದೊಂದಿಗೆ ಹರಕೆ ಅರ್ಪಿಸುತ್ತಿದ್ದರು ಕೆಲವರು ನಮಸ್ಕಾರ ಹಾಕಿದರು ಜನ ಜಂಗುಳಿ ಸಾಮಾನ್ಯವಾಗಿತ್ತು ಹುಸೇನಿ ಸಾಹೇಬ್ ದರ್ಶನಕ್ಕೆ ವಿಧಾನಸಭಾ ಕ್ಷೇತ್ರದ ಶಾಸಕ ಬಿ ಎಂ ನಾಗರಾಜ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್. ಕರಿಬಸಪ್ಪ, ಬಿ ಎಂ ವೆಂಕಟೇಶ್ ನಾಯಕ್, ಬಿ ಎಂ ಅಪ್ಪಾಜಿ ನಾಯಕ್, ಹೆಚ್.ಗಣೇಶ್, ಬಿ ಎಂ ಮಣಿಕಂಠ ನಾಯಕ್, ಬಿ ಎಂ ಅನಿಲ್ ನಾಯಕ್, ಆದೋನಿ ಬಿ.ಗೋವಿಂದಪ್ಪ, ಗೊರವರ ಶ್ರೀನಿವಾಸ್, ಲತ್ತಿ ಬಾಯಿ ಮೊಹಮ್ಮದ್ ಆಜಮ್, ಪವನ್ ಕುಮಾರ್ ದೇಸಾಯಿ, ಮೋದಿನ್, ಗೌಸೇ ರಬ್ಬಾನಿ, ಪತ್ತಾರ ಶ್ರೀನಿವಾಸ್, ಖತೀಬ್ ಜಹೀರುದ್ದೀನ್ ಬಾಬು,ಹಾಜಿ ಹಂಡಿ ಹುಸೇನ್ ಬಾಷಾ, ಹಾಜಿ ಹಂಡಿ ಹಿರೇಗಾಂಜಿ ಹುಸೇನ್ ಸಾಬ್, ಹಂಡಿ ಅಬ್ದುಲ್ ರಹೀಂ ಸಾಬ್, ಹಂಡಿ ಶಾಹಿದ್ , ಎ.ಟಿ. ಇಬ್ರಾಹಿಂ, ಮೊಹಮ್ಮದ್ ಮುನವರ್, ತೀನ್ ಸುಳಿ ಹುಸೇನ್, ಆಲಂ ಬಾಷಾ, ಹಂಡಿ ಹುಸೇನ್ ಸಾಬ್, ಡಾ. ಮೊಹಮ್ಮದ್ ಅಲಿ, ಹಂಡಿ ಹಾಶೀಮ್, ಮೊಹಮ್ಮದ್ ನೌಷಾದ್ ಅಲಿ, ಮಕಾಂದರ ಮೆಹಬೂಬ್ ಬಾಷಾ, ಮತ್ತಿತರ ಜನ ಪ್ರತಿನಿಧಿಗಳು ಮುಖಂಡರು ಪಾಲ್ಗೊಂಡಿದ್ದರು ಮುಂಜಾಗ್ರತ ಕ್ರಮವಾಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು.

ಪತ್ರಿಕೆ ಓದುವ
ಹವ್ಯಾಸ ಬೆಳಸಿಕೊಳ್ಳಿ

ನಶಾಮುಕ್ತ ಭಾರತ ನಿರ್ಮಾಣಕ್ಕೆ ಕೈಜೋಡಿಸಿ: ಸುವರ್ಣ ಆರ್.ಚಿಂಚನಸೂರ



ಆಳಂದ,ಜೂ.26-

ಮಾದಕ ವ್ಯಸನಗಳು ವ್ಯಕ್ತಿಯ ಆರೋಗ್ಯ, ಕುಟುಂಬದ ನೆಮ್ಮದಿ ಹಾಗೂ ಸಮಾಜದ ಶಾಂತಿಯನ್ನು ಹಾಳು ಮಾಡುವ ಮಾರಕ ಪಿಡುಗಾಗಿದ್ದು, ಯುವಜನರು ಯಾವುದೇ ರೀತಿಯ ದುಶ್ಚಟಗಳಿಗೆ ಬಲಿಯಾಗದೆ ಶಿಕ್ಷಣ, ಸಂಸ್ಕಾರ ಮತ್ತು ಸಾಮಾಜಿಕ ಜವಾಬ್ದಾರಿಗಳತ್ತ ಗಮನಹರಿಸಿ ನಶಾಮುಕ್ತ ಭಾರತ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕೃಷ್ಣಾ ಗ್ರಾಮೀಣ ಬ್ಯಾಂಕ್ (ಕೆಜಿಬಿ) ಸ್ಥಳೀಯ ಶಾಖೆಯ ವ್ಯವಸ್ಥಾಪಕಿ ಸುವರ್ಣ ಆರ್. ಚಿಂಚನಸೂರ ಕರೆ ನೀಡಿದರು.

ಪಟ್ಟಣದ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನಲ್ಲಿ ಕೃಷ್ಣಾ ಗ್ರಾಮೀಣ ಬ್ಯಾಂಕ್ ಸ್ಥಳೀಯ ಶಾಖೆಯ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ನಶಾಮುಕ್ತ ಭಾರತ ಅಭಿಯಾನ ಹಾಗೂ ವಿಕಸಿತ ಭಾರತ ಗುರುತು ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಅಭಿವೃದ್ಧಿ ಮತ್ತು ಪ್ರಗತಿಯಲ್ಲಿ ಯುವ ಸಮುದಾಯದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವಿದ್ಯಾರ್ಥಿಗಳು ತಮ್ಮ ಜೀವನದ ಅಮೂಲ್ಯ ಸಮಯವನ್ನು ದುಶ್ಚಟಗಳಿಗೆ ವ್ಯರ್ಥ ಮಾಡದೇ ಜ್ಞಾನ ಸಂಪಾದನೆ, ಕೌಶಲ್ಯ ವೃದ್ಧಿ ಹಾಗೂ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಬಳಸಿಕೊಳ್ಳಬೇಕು. ನಶಾಮುಕ್ತ ಸಮಾಜವೇ ಆರೋಗ್ಯವಂತ ಮತ್ತು ಸದೃಢ ರಾಷ್ಟ್ರದ ಅಡಿಪಾಯವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಈ ಅಭಿಯಾನದ ರಾಯಭಾರಿಯಾಗಿ ಕಾರ್ಯನಿರ್ವಹಿಸಬೇಕೆಂದು ಅವರು ಸಲಹೆ ನೀಡಿದರು.

ಆರ್ಥಿಕ, ಸಾಮಾಜಿಕ ಹಾಗೂ ಮಾನಸಿಕ ಸಂಕಷ್ಟಗಳು ಉಂಟಾಗುತ್ತವೆ. ಇದರಿಂದ ವ್ಯಕ್ತಿಯ ಭವಿಷ್ಯ ಹಾಳಾಗುವ ಜೊತೆಗೆ ಕುಟುಂಬ ಮತ್ತು ಸಮಾಜಕ್ಕೂ ದುಷ್ಪರಿಣಾಮ ಉಂಟಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ಸ್ನೇಹಿತರು, ಕುಟುಂಬ ಸದಸ್ಯರು ಹಾಗೂ ಸಮಾಜದಲ್ಲಿ ಜಾಗೃತಿ ಮೂಡಿಸುವ ಮೂಲಕ ನಶಾಮುಕ್ತ ಭಾರತದ ಕನಸನ್ನು ನನಸಾಗಿಸಲು ಮುಂದಾಗಬೇಕು ಎಂದು ತಿಳಿಸಿದರು.

ಅಭಿಯಾನಗಳ ಮೂಲಕ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ, ಸಾಮಾ ಜಿಕ ಕಾಳಜಿ ಹಾಗೂ ಆರೋಗ್ಯಕರ ಜೀವನಶೈಲಿಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ವಿಕಸಿತ ಭಾರತದ ಗುರಿ ಸಾಧನೆಗೆ ಶಿಸ್ತು, ಶಿಕ್ಷಣ, ಕಠಿಣ ಪರಿಶ್ರಮ ಹಾಗೂ ಉತ್ತಮ ನಾಗರಿಕ ಮೌಲ್ಯಗಳು ಅತ್ಯಗತ್ಯವಾಗಿದ್ದು, ಯುವಜನರು ಇವುಗಳನ್ನು ಅಳವಡಿಸಿಕೊಳ್ಳುವ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯ ಪಾತ್ರವಹಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಪಂಡಿತರಾವ್ ಎನ್. ಪಾಟೀಲ ಮಾತನಾಡಿ, ಯುವಕರು ದೇಶದ ಭವಿಷ್ಯದ ಶಕ್ತಿಯಾಗಿದ್ದು, ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಬಲ್ಲ ಸಾಮರ್ಥ್ಯ ಹೊಂದಿದ್ದಾರೆ. ವಿದ್ಯಾರ್ಥಿಗಳು ಮಾದಕ ವ್ಯಸನಗಳಿಂದ ದೂರವಿದ್ದು ಜ್ಞಾನ, ನೈತಿಕತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡಾಗ ಮಾತ್ರ ವಿಕಸಿತ ಭಾರತ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಶಾಂತಕುಮಾರ ಜಿಂಕಪಳ್ಳಿ, ಶಶಿಕಾಂತ ಮೇತ್ರಿ, ಅಂಬರಾಯ, ಎಫ್‌ಡಿಎ ಸಂತೋಷಕುಮಾರ ಚಂದಾಪೂರ, ಎಸ್‌ಡಿಎ ಶರಣಬಸಪ್ಪ ವಿಭೂತಿ ಪಾಟೀಲ, ಗ್ರಂಥಪಾಲಕಿ ಸಭೋಧಿನಿ, ಕೆಜಿಬಿ ಶಾಖೆಯ ಕ್ಷೇತ್ರಾಧಿಕಾರಿ ಭೋಮಾಚನಸ್, ಚರಣ್‌ಕುಮಾರ, ರುಕ್ಮಿಣಿ, ಸೋಮಯ್ಯಾ, ರವಿ ಎಸ್. ಜವಳಿ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವೀರಯ್ಯಾ ಸ್ವಾಮಿ ತಡಕಲ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಗುತ್ತಿಗೆ ಆಧಾರಿತ ನೇಮಕಗೊಂಡ ವೈದ್ಯರಿಗೆ ನೇಮಕಾತಿ ಪತ್ರ ವಿತರಣೆ



ಕಲಬುರಗಿ,ಜೂ.25-

ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ 18 ವೈದ್ಯಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರು ಬುಧವಾರ ನೇಮಕಾತಿ ಪತ್ರ ವಿತರಿಸಿದರು.

ಜಿಲ್ಲೆಯ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ 16 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ನಡೆಸಿದ ವಾಕ್-ಇನ್-ಇಂಟರ್ವ್ಯೂನಲ್ಲಿ ಭಾಗವಹಿಸಿದ ಅಭ್ಯರ್ಥಿಗಳ ಪೈಕಿ 13 ಮಂದಿ ಆಯ್ಕೆಯಾಗಿದ್ದು, ಅವರಿಗೆ ನೇಮಕಾತಿ ಆದೇಶ ನೀಡಲಾಯಿತು. ಅದೇ ರೀತಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿನ 6 ತುರ್ತು ಚಿಕಿತ್ಸಾ ಮತ್ತು ಹಿರಿಯ ವೈದ್ಯಾಧಿಕಾರಿಗಳ ಹುದ್ದೆಗಳ ಪೈಕಿ 5 ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಅವರಿಗೂ ನೇಮಕಾತಿ ಪತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶರಣಬಸಪ್ಪ ಕ್ಯಾತನಾಳ ಹಾಗೂ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ಸಿದ್ರಾಮ ಪಾಟೀಲ ಉಪಸ್ಥಿತರಿದ್ದರು.

ಇನ್ನೂ 4 ಹುದ್ದೆಗಳು ಖಾಲಿ:

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 2 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹಾಗೂ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ/ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 2 ವೈದ್ಯಾಧಿಕಾರಿಗಳ ಹುದ್ದೆಗಳು ಇನ್ನೂ ಖಾಲಿ ಇವೆ. ಆಸಕ್ತ ಅಭ್ಯರ್ಥಿಗಳು ಗುತ್ತಿಗೆ ಆಧಾರದ ನೇಮಕಾತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಕೌಟುಂಬಿಕ ಕಲಹ : ಮಗುವಿನೊಂದಿಗೆ ಗರ್ಭಿಣಿ ಮಹಿಳೆ ಬಾವಿಗೆ ಹಾರಿ ಆತ್ಮಹತ್ಯೆ



ಕಲಬುರಗಿ,ಜೂ.26-

ಕೌಟುಂಬಿಕ ಕಲಹದ ಹಿನ್ನೆಲೆ ಗರ್ಭಿಣಿ ಮಹಿಳೆಯೊಬ್ಬರು ತಮ್ಮ ಒಂದೂವರೆ ವರ್ಷದ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ಆಳಂದ ತಾಲೂಕಿನ ಚಿಂಚನಸೂರು ಗ್ರಾಮದಲ್ಲಿ ಗುರುವಾರ ನಡೆದಿದೆ. ಮೃತರನ್ನು ಅಂಬಿಕಾ ವೀರಭದ್ರಪ್ಪ (25) ಹಾಗೂ ಅವರ ಮಗುವನ್ನು ಆರಾಧ್ಯ ಎಂದು ಗುರುತಿಸಲಾಗಿದೆ. ಮೂಲಗಳ ಪ್ರಕಾರ, ಅಂಬಿಕಾ ಅವರು ಮೂರು ವರ್ಷಗಳ ಹಿಂದೆ ಚಿಂಚನಸೂರು ಗ್ರಾಮದ ವೀರಭದ್ರ ಅವರೊಂದಿಗೆ ವಿವಾಹವಾಗಿದ್ದರು. ಮದುವೆಯಾದ ನಂತರ ದಂಪತಿಗಳ ನಡುವೆ ಹೊಂದಾಣಿಕೆ ಕೊರತೆಯಿಂದಾಗಿ ಆಗಾಗ ಕೌಟುಂಬಿಕ ಕಲಹಗಳು ನಡೆಯುತ್ತಿದ್ದು, ಇದರಿಂದ ಅಂಬಿಕಾ ಮನನೊಂದಿದ್ದರು ಎನ್ನಲಾಗಿದೆ.

ಗುರುವಾರ ಬೆಳಗ್ಗೆ ಅಂಬಿಕಾ ಮನೆಯಿಂದ ಹೊರಟು ಗ್ರಾಮದ ಬಾವಿಯತ್ತ ತೆರಳಿದ್ದಾರೆ. ಬಾವಿ ಬಳಿ ತಮ್ಮ ಚಪ್ಪಲಿಗಳನ್ನು ಬಿಟ್ಟು, ಮಗುವನ್ನು ಬೆನ್ನಿಗೆ ಕಟ್ಟಿಕೊಂಡೇ ಬಾವಿಗೆ ಹಾರಿರುವುದು ನಂತರ ಬೆಳಕಿಗೆ ಬಂದಿದೆ. ಬೆಳಗ್ಗೆಯಿಂದ ಅಂಬಿಕಾ ಕಾಣಿಸದ ಹಿನ್ನೆಲೆಯಲ್ಲಿ ಕುಟುಂಬ ಸ್ಥರು ಹುಡುಕಾಟ ನಡೆಸಿದ್ದಾರೆ. ಈ ವೇಳೆ ಬಾವಿ ಸಮೀಪ ಚಪ್ಪಲಿಗಳು ಪತ್ತೆಯಾಗಿದ್ದು, ಅನುಮಾನಗೊಂಡ ಸ್ಥಳೀಯರು ಬಾವಿಯಲ್ಲಿ ಶೋಧ ನಡೆಸಿದಾಗ ತಾಯಿ ಮತ್ತು ಮಗುವಿನ ಮೃತದೇಹಗಳು ಪತ್ತೆಯಾಗಿವೆ.

ಘಟನೆಯ ಕುರಿತು ನರೋಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ.



ಎಸ್‌ಐಆರ್ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಜಾಗೃತಿಯಿಂದ ಕೆಲಸ ಮಾಡಬೇಕು : ಸಚಿವ ಈಶ್ವರ್ ಖಂಡ್ರೆ

ಬೀದರ್,ಜೂ.26-

ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಯಾವುದೇ ಅರ್ಹ ಮತದಾರರ ಹೆಸರು ಕೈಬಿಡದಂತೆ ಎಚ್ಚರಿಕೆ ವಹಿಸುವುದು ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತನ ಜವಾಬ್ದಾರಿಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ಕರೆ ನೀಡಿದರು.

ನಗರದ ಲಾವಣ್ಯ ಕಲ್ಯಾಣ ಮಂಟಪದಲ್ಲಿ ಗುರುವಾರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಎಸ್‌ಐಆರ್ ಕುರಿತು ಜನಜಾಗೃತಿ ಹಾಗೂ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಯಾವುದೇ ಅರ್ಹ ನಾಗರಿಕರ ಹೆಸರು ಕೈಬಿಡದಂತೆ ಬೂತ್ ಮಟ್ಟದಲ್ಲಿ ಮನೆ ಮನೆಗೆ ಭೇಟಿ ನೀಡಿ ಮತದಾರರಿಗೆ ಅಗತ್ಯ ಮಾಹಿತಿ ನೀಡಬೇಕು. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳಲು ಜನರಿಗೆ ಮಾರ್ಗದರ್ಶನ ನೀಡುವ ಜವಾಬ್ದಾರಿ ಕಾರ್ಯಕರ್ತರ ಮೇಲಿದೆ ಎಂದು ಹೇಳಿದರು.

ಪ್ರಜಾಪ್ರಭುತ್ವದ ನಿಜವಾದ ಶಕ್ತಿ ಮತದಾರರಲ್ಲಿದೆ. ಆದ್ದರಿಂದ ಎಸ್‌ಐಆರ್ ಪ್ರಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸಿ, ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಪ್ರತಿಯೊಬ್ಬ ಅರ್ಹ ನಾಗರಿಕರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸುವ ನಿಟ್ಟಿನಲ್ಲಿ ಸಂಘಟಿತವಾಗಿ ಕಾರ್ಯನಿರ್ವಹಿಸಬೇಕು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಸಂಸದ ಸಾಗರ್ ಖಂಡ್ರೆ, ಶಾಸಕ ರಹೀಮ್ ಖಾನ್ ಹಾಗೂ ಮಾಜಿ ಸಚಿವ ರಾಜಶೇಖರ್ ಪಾಟೀಲ್ ಅವರು ಎಸ್‌ಐಆರ್ ಜಾಗೃತಿ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಬಸವರಾಜ್ ಜಾಬಶೆಟ್ಟಿ, ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ್, ಮಾಲಾ ನಾರಾಯಣರಾವ್, ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಅಮೃತರಾವ್ ಚಿಮಕೋಡೆ, ಭೀಮಸೇನ್ ಶಿಂಧೆ, ಸಂಜಯ್ ಜಾಗಿರ್ದಾರ್, ಮಾಜಿ ವಿಧಾನ ಪರಿಷತ್ ಸದಸ್ಯ ಅರವಿಂದ್ ಅರಳಿ, ಮೀನಾಕ್ಷಿ ಸಂಗ್ರಾಮ್ ಹಾಗೂ ಪಂಡಿತ್ ಚಿದ್ರಿ, ಸೇರಿದಂತೆ ಕಾಂಗ್ರೆಸ್ ಪಕ್ಷದ ಇತರ ನಾಯಕರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಲಿಂಗದಹಳ್ಳಿ ಗ್ರಾಮದ ಸರ್ಕಾರಿ ಶಾಲೆಗೆ ಶಾಸಕಿ ಅನ್ನಪೂರ್ಣ ಈ.ತುಕಾರಾಂ ಭೇಟಿ



ಸಂಡೂರು/ಬಳ್ಳಾರಿ,ಜೂ.26-

ಸಂಡೂರು ವಿಧಾನಸಭಾ ಕ್ಷೇತ್ರದ ಲಿಂಗದಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶಾಸಕಿಯರಾದ ಅನ್ನಪೂರ್ಣ ಈ. ತುಕಾರಾಂ ಅವರು ಅನಿರೀಕ್ಷಿತವಾಗಿ ಭೇಟಿ ನೀಡಿ, ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ, ಬೋಧನಾ ಗುಣಮಟ್ಟ ಹಾಗೂ ಶಾಲೆಯ ಮೂಲಸೌಕರ್ಯಗಳನ್ನು ಪರಿಶೀಲಿಸಿದರು.

ಶಾಲೆಗೆ ಆಗಮಿಸಿದ ಶಾಸಕಿಯವರು ನೇರವಾಗಿ ತರಗತಿ ಕೊಠಡಿಗಳಿಗೆ ತೆರಳಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಪರಿಶೀಲಿಸಿದರು. ಶಿಕ್ಷಕಿಯ ಪಾತ್ರವನ್ನು ತಾವೇ ನಿರ್ವಹಿಸಿದ ಅವರು, ಕೈಯಲ್ಲಿ ಸೀಮೆಸುಣ್ಣ ಹಿಡಿದು ಕಪ್ಪು ಹಲಗೆಯ ಮೇಲೆ ಅಕ್ಷರಗಳು ಮತ್ತು ಪದಗಳನ್ನು ಬರೆದು ಮಕ್ಕಳಿಗೆ ಪಾಠ ಬೋಧಿಸಿದರು. ವಿದ್ಯಾರ್ಥಿಗಳಿಂದ ಓದಿಸಿ, ಬರೆಯಿಸಿ ಅವರ ಕಲಿಕಾ ಮಟ್ಟವನ್ನು ಪರೀಕ್ಷಿಸಿದ ಅವರು, ತಪ್ಪುಗಳನ್ನು ತಿದ್ದಿಕೊಡುತ್ತಾ ಅಕ್ಷರಾಭ್ಯಾಸ ಮಾಡಿಸಿದರು.

ವಿದ್ಯಾರ್ಥಿಗಳಿಗೆ ಪ್ರತಿದಿನ ಅಭ್ಯಾಸ ಮಾಡುವುದರಿಂದ ಉತ್ತಮ ಜ್ಞಾನ ಸಂಪಾದಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದ ಅವರು, ಓದು-ಬರಹದಲ್ಲಿ ಯಾವುದೇ ತೊಂದರೆಗಳಿದ್ದರೆ ತಮ್ಮನ್ನು ಸಂಪರ್ಕಿಸಬಹುದು ಎಂದು ಧೈರ್ಯ ತುಂಬಿದರು. ಶಿಕ್ಷಣದ ಮೂಲಕವೇ ಜೀವನದಲ್ಲಿ ಯಶಸ್ಸು ಸಾಧಿಸಬಹುದು ಎಂದು ಮಕ್ಕಳಿಗೆ ಪ್ರೇರಣೆ ನೀಡಿದರು.

ಈ ವೇಳೆ ಶಿಕ್ಷಕರೊಂದಿಗೆ ಚರ್ಚಿಸಿದ ಶಾಸಕಿಯವರು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಯಾವುದೇ ನಿರ್ಲಕ್ಷ್ಯ ತೋರಬಾರದು ಎಂದು ಸೂಚಿಸಿದರು. ಬೋಧನಾ ಕಾರ್ಯದಲ್ಲಿ ಕರ್ತವ್ಯಲೋಪ ಕಂಡುಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.


ನಂತರ ಶಾಲೆಯ ಕುಡಿಯುವ ನೀರು, ಶೌಚಾಲಯ, ತರಗತಿ ಕೊಠಡಿಗಳು ಸೇರಿದಂತೆ ಮೂಲಸೌಕರ್ಯಗಳ ಬಗ್ಗೆ ಮಾಹಿತಿ ಪಡೆದು, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಹಾಜರಾತಿ ಹಾಗೂ ಶಾಲೆಯ ಅಗತ್ಯತೆಗಳ ಕುರಿತು ಶಿಕ್ಷಕರು ಮತ್ತು ಅಧಿಕಾರಿಗಳಿಂದ ವಿವರ ಸಂಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅನ್ನಪೂರ್ಣ ತುಕಾರಾಂ ಅವರು, ''ಶಿಕ್ಷಣವೇ ಸಮಾಜದ ಅಭಿವೃದ್ಧಿಗೆ ಭದ್ರ ಅಡಿಪಾಯ. ಗ್ರಾಮೀಣ ಭಾಗದ ಮಕ್ಕಳಿಗೂ ನಗರ ಪ್ರದೇಶದ ವಿದ್ಯಾರ್ಥಿಗಳಷ್ಟೇ ಗುಣಮಟ್ಟದ ಶಿಕ್ಷಣ ದೊರೆಯಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಅಡಗಿರುವ ಪ್ರತಿಭೆಯನ್ನು ಹೊರತರಲು ಶಿಕ್ಷಕರು ಹಾಗೂ ಪೋಷಕರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲ ರೀತಿಯ ಸಹಕಾರವನ್ನು ನೀಡಲಾಗುವುದು'' ಎಂದು ಹೇಳಿದರು.

ಶಾಸಕಿಯವರ ಅನಿರೀಕ್ಷಿತ ಭೇಟಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಗ್ರಾಮಸ್ಥರಲ್ಲಿ ವಿಶೇಷ ಚರ್ಚೆಗೆ ಕಾರಣವಾಗಿದ್ದು, ಮಕ್ಕಳ ಶಿಕ್ಷಣದ ಗುಣಮಟ್ಟದ ಬಗ್ಗೆ ಅವರು ತೋರಿದ ಕಾಳಜಿಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ



ಘೋರಿ ಘಜ್ನಿಗೂ ಶ್ರೀರಾಮನ ಸಂಪತ್ತು ಲೂಟಿ ಹೊಡೆದಿರುವವರಿಗೂ ವ್ಯತ್ಯಾಸ ಏನುಳಿಯಿತು?

ಮೊಘಲರು ಹಿಂದೂ ದೇವಸ್ಥಾನಗಳನ್ನು ಲೂಟಿ ಮಾಡಿ ಸಂಪತ್ತು ದೋಚುತ್ತಿದ್ದರು. ಇದೀಗ ಹಿಂದೂಗಳ ದೇವಸ್ಥಾನವನ್ನು ಹಿಂದೂಗಳೇ ಲೂಟಿ ಮಾಡುತ್ತಿದ್ದಾರೆ. ಅದನ್ನು ಪ್ರಶ್ನೆ ಮಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ದೇಣಿಗೆ ನೀಡದವರು, ಮಂದಿರಕ್ಕೆ ಭೇಟಿ ಕೊಡದವರಿಗೆ ಆರೋಪ ಮಾಡುವ ಹಕ್ಕಿಲ್ಲ ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಆದರೆ, ಇದು ಕೋಟ್ಯಂತರ ರಾಮ ಭಕ್ತರ, ಹಿಂದೂಗಳ ನಂಬಿಕೆಯ ಪ್ರಶ್ನೆ. ದೇವರನ್ನು ತಮ್ಮ ಸ್ವಾರ್ಥ ರಾಜಕಾರಣಕ್ಕೆ ಬಳಕೆ ಮಾಡಿಕೊಂಡವರು ಇದಕ್ಕೆ ಉತ್ತರಿಸಲೇಬೇಕಿದೆ.

ರಾಮ ಮಂದಿರ ನಿರ್ಮಾಣ ಮಾಡಿಯೇ ತೀರುತ್ತೇವೆ ಎಂಬ ಪ್ರತಿಜ್ಞೆಯೊಂದಿಗೆ ದೇಶಾದ್ಯಂತ ರಥಯಾತ್ರೆ, ಇಟ್ಟಿಗೆ ಸಂಗ್ರಹ, ದೇಣಿಗೆ ಸಂಗ್ರಹ ಅಭಿಯಾನ ನಡೆಸುತ್ತಾ ಸಂಘ ಪರಿವಾರ ಅಂತಿಮವಾಗಿ ದೇಶದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಯಿತು. ಅದಕ್ಕಾಗಿ ದೇಶದೆಲ್ಲೆಡೆ ನಡೆದ ಕೋಮುಗಲಭೆ, ನರಹತ್ಯೆಗಳಿಗೆ ಲೆಕ್ಕವಿಲ್ಲ, ನೆಲಸಮವಾದ ಮಸೀದಿಗಳಿಗೆ ಬರವಿಲ್ಲ. ಹೀಗೆ ಕೋಮು ಧ್ರುವೀಕರಣದ ಮೂಲಕ ಭಾರತೀಯ ಜನತಾ ಪಕ್ಷವನ್ನು ಕಟ್ಟಿದ ಆರೆಸ್ಸೆಸ್ ಪರಿವಾರದ ಅಡ್ವಾಣಿ, ವಾಜಪೇಯಿ, ಮುರಳೀ ಮನೋಹರ ಜೋಶಿ, ಉಮಾಭಾರತಿ ಮುಂತಾದ ಮೊದಲ ಸಾಲಿನ ನಾಯಕರೆಲ್ಲ ಈಗ ತೆರೆ ಮರೆಗೆ ಸರಿದಿದ್ದಾರೆ. ಅದರ ಲಾಭ ಪಡೆದ ನರೇಂದ್ರ ಮೋದಿಯವರು ಸತತ ಮೂರನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಅನುಭವಿಸುತ್ತಿದ್ದಾರೆ.

ಮೋದಿಯವರು ಪ್ರಧಾನಿಯಾಗಿ ಮೊದಲ ಅವಧಿ ಮುಗಿಯುವವರೆಗೂ ರಾಮ ಜನ್ಮಭೂಮಿ ಪ್ರಕರಣ ಇತ್ಯರ್ಥವಾಗಿರಲಿಲ್ಲ. ಆದರೆ ಎರಡನೇ ಅವಧಿಯಲ್ಲಿ ರಾಮಮಂದಿರ ಪರವಾಗಿ ತೀರ್ಪು ಬರುತ್ತಿದ್ದಂತೆ ಮಂದಿರ ನಿರ್ಮಾಣ ಕಾರ್ಯ ಶುರುವಾಗಿತ್ತು. 2024ರ ಏಪ್ರಿಲ್‌ನಲ್ಲಿ ಲೋಕಸಭಾ ಚುನಾವಣೆ ನಡೆಯಲಿತ್ತು. ಆದರೆ, ಜನವರಿಯಲ್ಲಿ ಇನ್ನೂ ಪೂರ್ಣಗೊಳ್ಳದ ರಾಮ ಮಂದಿರಲ್ಲಿ ಜಾತ್ಯತೀತ ದೇಶದ ಪ್ರಧಾನಿ ನರೇಂದ್ರ ಮೋದಿಯವರು ರಾಮ ಲಲ್ಲಾನ ಮೂರ್ತಿಯ ಪ್ರತಿಷ್ಠಾಪನೆಯನ್ನು ಮಾಡಿ ಲೋಕಸಭಾ ಚುನಾವಣೆಯ ಪ್ರಚಾರ ಶುರು ಮಾಡಿದ್ದರು. ಬಹುಸಂಖ್ಯಾತ ಹಿಂದೂಗಳ ಆರಾಧ್ಯ ದೈವ ಶ್ರೀರಾಮನನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಂಡ ಪಕ್ಷ ಬಿಜೆಪಿ. ಸಂಸತ್ತಿನೊಳಗೂ, ಹೊರಗೂ ಶ್ರೀರಾಮನ ಜಪ ಮಾಡುವ ಬಿಜೆಪಿಗರು ಈಗ ರಾಮ ಮಂದಿರದ ಅವ್ಯವಹಾರ, ಒಳಗಿದ್ದವರೇ ನಡೆಸಿದ ದರೋಡೆ ಬಗ್ಗೆ ಆರೋಪ ಮಾಡುವ ವಿಪಕ್ಷಗಳ ನೈತಿಕತೆಯ ಬಗ್ಗೆ ಪ್ರಶ್ನೆ ಮಾಡುತ್ತಿರುವುದು ತಮಾಷೆಯಾಗಿದೆ.

ಐನೂರು ವರ್ಷಗಳ ಹಿಂದೂಗಳ ಹೋರಾಟ, ರಾಮ ಮಂದಿರ ನಿರ್ಮಾಣದ ಕನಸನ್ನು ಮೋದಿಜಿ ನನಸಾಗಿಸಿದ್ದಾರೆ ಎಂದು ಹೇಳುವ ಮೋದಿ ಭಕ್ತರಿಗೆ ಈಗ ಪೀಕಲಾಟ ಶುರುವಾಗಿದೆ. ನಿಜವಾದ ಕೋಟ್ಯಂತರ ರಾಮ ಭಕ್ತರ ಭಾವನೆಗಳಿಗೆ ಈಗ ನಿಜಕ್ಕೂ ನೋವಾಗಿದೆ. ಹಿಂದೂ ಖತ್ರೆ ಮೇ ಹೈ ಎಂದು ಹೇಳುತ್ತ ರಾಜಕೀಯ ಬೇಳೆ ಬೇಯಿಸಿಕೊಂಡ ಬಿಜೆಪಿಯ ಆಡಳಿತದಲ್ಲಿ ಸಾಕ್ಷಾತ್ ಶ್ರೀರಾಮ ಚಂದ್ರ ತನ್ನ ಮಂದಿರದಲ್ಲೂ ಸುರಕ್ಷಿತನಾಗಿಲ್ಲ. ಒಂದು ಕಡೆ ಬಿಜೆಪಿ ಮತ್ತು ಸಂಘ ಪರಿವಾರ ಸಂಘಟನೆಗಳ ಯುವಕರು ಸಮಾಜಘಾತಕ ಕೆಲಸ ಮಾಡುವಾಗ ರಾಮನ ಹೆಸರು ಹೇಳುತ್ತಿದ್ದಾರೆ. ಮುಸ್ಲಿಮರ ಮೇಲೆ ಹಲ್ಲೆ ಮಾಡುವಾಗ, ಮಸೀದಿಗೆ ಕಲ್ಲು ಹೊಡೆಯುವಾಗ, ಗೋರಕ್ಷಣೆಯ ಹೆಸರಿನಲ್ಲಿ ದಾಂಧಲೆ ನಡೆಸುವಾಗ, ಬಿಜೆಪಿಯೇತರ ಪಕ್ಷಗಳ ಮುಖಂಡರನ್ನು ಕೆಣಕಲು ಜೈ ಶ್ರೀರಾಮ್ ಘೋಷಣೆ ಕೂಗುವ ಮೂಲ ಶ್ರೀರಾಮನಿಗೆ ಅವಮಾನ ಮಾಡುತ್ತಿದ್ದಾರೆ.

ರಾಮ ಮಂದಿರ ನಿರ್ಮಾಣಕ್ಕೂ ಮೊದಲೇ ದೇಣಿಗೆ ಹಣದ ದುರುಪಯೋಗದ ಬಗ್ಗೆ ಆರೋಪಗಳು ಕೇಳಿ ಬಂದಿತ್ತು. ಆರೆಸ್ಸೆಸ್‌ನಿಂದ ಹೊರ ಬಂದ ಹಲವರು ರಾಮ ಮಂದಿರದ ದೇಣಿಗೆಗೆ, ಬೆಳ್ಳಿ ಬಂಗಾರದ ಇಟ್ಟಿಗೆಗಳಿಗೆ, ವಜ್ರ ವೈಢೂರ್ಯಗಳಿಗೆ ರಶೀದಿ ಕೊಡದಿರುವುದನ್ನು ಬಯಲು ಮಾಡಿದ್ದಾರೆ. ಪ್ರಕರಣ ಕೋರ್ಟ್ ನಲ್ಲಿದ್ದಾಗಲೇ ಕೆತ್ತನೆಯ ಕೆಲಸಗಳು ಆರಂಭಗೊಂಡಿತ್ತು. ತೀರ್ಪು ಬರುತ್ತಿದ್ದಂತೆ ಮೋದಿಯವರು ಅದರ ಲಾಭವನ್ನು ಪಡೆಯಲು ಯತ್ನಿಸಿದ್ದರ ಫಲವಾಗಿ ಎರಡೇ ವರ್ಷಗಳಲ್ಲಿ ರಾಮಮಂದಿರ ಉದ್ಘಾಟನೆ ಆಗುವಂತಾಗಿತ್ತು. ನಿರ್ಮಾಣ ಕಾಮಗಾರಿಯನ್ನು ತನ್ನ ರಾಜಕೀಯ ಮಹತ್ವಾಕಾಂಕ್ಷೆಗೆ ಬಿಜೆಪಿ ಬಳಸಿಕೊಂಡಿತ್ತು. ಅಪೂರ್ಣ ಮಂದಿರವನ್ನು 2024ರ ಜನವರಿಯಲ್ಲಿ ಪ್ರಧಾನಿ ಮೋದಿಯವರು ಉದ್ಘಾಟನೆ ಮಾಡಿದ್ದರು. ಚುನಾವಣೆಗೆ ಮೂರು ತಿಂಗಳಿರುವಾಗ ಮಂದಿರ ಉದ್ಘಾಟನೆ ಮಾಡಿ ಅದರ ಕ್ರೆಡಿಟ್ ಪಡೆಯಲು ಯತ್ನಿಸಿದ್ದರೂ ಅದು ಫಲ ನೀಡಲಿಲ್ಲ, ಅಯೋಧ್ಯೆ ಕ್ಷೇತ್ರದಲ್ಲಿಯೇ ಬಿಜೆಪಿ ಅಭ್ಯರ್ಥಿ ಸೋಲುಂಡಿದ್ದರು. ಈ ಬಾರಿ ನಾನೂರಕ್ಕೂ ಹೆಚ್ಚು ಸೀಟು ಪಡೆಯುವ ಅತ್ಯುತ್ಸಾಹದಲ್ಲಿದ್ದ ಬಿಜೆಪಿಗೆ ಫಲಿತಾಂಶ ಬಂದಾಗ ಆಘಾತ ಆಗಿತ್ತು. ಹಿಂದಿನ ಸಲಕ್ಕಿಂತ ಕಡಿಮೆ ಸೀಟು ಗಳಿಸಿತ್ತು. ಮಿತ್ರ ಪಕ್ಷಗಳ ಎನ್‌ಡಿಎ ಕೂಟದ ಸರ್ಕಾರ ರಚನೆ ಅನಿವಾರ್ಯವಾಗಿತ್ತು. ಮುಂದಿನ ವರ್ಷ ಉತ್ತರಪ್ರದೇಶ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಖಂಡಿತವಾಗಿ ಇದು ವಿಪಕ್ಷಗಳಿಗೆ ಪ್ರಬಲ ಅಸ್ತ್ರವಾಗಿದೆ.

ಕಳೆದ ಮಳೆಗಾಲದಲ್ಲಿ ರಾಮಮಂದಿರದೊಳಗೆ ಮಳೆ ನೀರು ಸೋರಿಕೆಯಾಗಿ ಕಳಪೆ ಕಾಮಗಾರಿಯ ಬಗ್ಗೆ ಟೀಕೆ ವ್ಯಕ್ತವಾಗಿತ್ತು. ಒಬ್ಬ ವ್ಯಕ್ತಿಯ ಹಿತಾಸಕ್ತಿಗೆ ಎಲ್ಲವನ್ನೂ ಧಾರೆ ಎರೆಯಲು ಸಿದ್ದರಾಗಿದ್ದ ಬಹುಸಂಖ್ಯಾತ ಹಿಂದೂಗಳು ಈಗ ನಿಜಕ್ಕೂ ಅಪಾಯಕ್ಕೆ ಸಿಲುಕಿದ್ದಾರೆ. ರಾಮಮಂದಿರ ಉದ್ಘಾಟನೆಯ ಸಮಯದಲ್ಲಿ ದೇಶವಿದೇಶದ ಭಕ್ತರು ನೀಡಿದ ಹಣ, ಚಿನ್ನ, ಬೆಳ್ಳಿಯ ವಸ್ತುಗಳು, ಆಭರಣಗಳು, ಹುಂಡಿಗೆ ಹಾಕಿದ ಹಣ ಹೀಗೆ ಸಾವಿರಾರು ಕೋಟಿ ಹಣವನ್ನು ಟ್ರಸ್ಟ್ ಮುಖ್ಯಸ್ಥರು, ಸಿಬ್ಬಂದಿ ಎಲ್ಲರೂ ಸೇರಿ ದೋಚಿದ್ದು ಭಾರೀ ವಿವಾದಕ್ಕೆ ಕಾರಣವಾಗಿದೆ. ಈ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಯೋಗಿ ಸರ್ಕಾರ ಎಸ್‌ಐಟಿ ರಚನೆ ಮಾಡಿದೆ. ಈ ಮಧ್ಯೆ ಆಪ್ ಮುಖಂಡ ಅರವಿಂದ ಕೇಜ್ರಿವಾಲ್ ಇಂದು ರಾಮಮಂದಿರಕ್ಕೆ ಭೇಟಿ ನೀಡಿದ್ದಾರೆ. ಯೋಗಿ ಆದಿತ್ಯನಾಥ್ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಹೇಳಿದ್ದಾರೆ. ರಾಮ ಭಕ್ತರನ್ನು ಪರೀಕ್ಷಿಸಬೇಡಿ, ಸಾಕ್ಷ್ಯಗಳಿದ್ದರೆ ಎಸ್‌ಐಟಿ ಮುಂದೆ ಸಲ್ಲಿಸಿ ಎಂದು ಯೋಗಿ ಆದಿತ್ಯನಾಥ ಉಗ್ರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಇಡೀ ಟ್ರಸ್ಟ್ ಪದಾಧಿಕಾರಿಗಳನ್ನು ನೇಮಕ ಮಾಡಿದ್ದು ಪ್ರಧಾನಿ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ. ಈಗ ಹೊಣೆ ಹೊರಬೇಕಿರುವವರೂ ಅವರೇ ಅಲ್ಲವೇ?

ಆರೋಪ ಕೇಳಿ ಬಂದ ಬೆನ್ನಲ್ಲೇ ಸಿಂಧಿ ಸಮುದಾಯ ಸಂಘಟನೆಯ ಮುಖ್ಯಸ್ಥರು ತಾವು ದೇಣಿಗೆಯಾಗಿ ಕೊಟ್ಟ 200 ಕೇಜಿ ಬೆಳ್ಳಿಯ ಬಗ್ಗೆ ಟ್ರಸ್ಟ್ ಸ್ಪಷ್ಟೀಕರಣ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಶಿವಸೇನಾ ಮುಖ್ಯಸ್ಥರು ತಾವು ನೀಡಿರುವ ದಾನಕ್ಕೆ ರಸೀದಿಯನ್ನೇ ನೀಡಿಲ್ಲ ಎಂದು ಆರೋಪಿಸಿದ್ದಾರೆ. ಮಹಿಳೆಯೊಬ್ಬರು ತಾನು ಬೆಳ್ಳಿಯ ಕಾಗೆ ನೀಡಿರುವುದಾಗಿ ಹೇಳಿಕೊಂಡಿದ್ದಾರೆ. ಶ್ರೀರಾಮನಿಗೆ ನೀಡಿರುವ ಆಭರಣದಲ್ಲಿದ್ದ ವಜ್ರದ ಹರಳುಗಳು ಕೂಡ ಕಾಣೆಯಾಗಿದೆ ಎಂದು ವರದಿಯಾಗಿದೆ.

ಈ ಲೂಟಿಯಲ್ಲಿ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಹೆಸರೂ ಕೇಳಿ ಬಂದಿದೆ. ಜೂ. 26ರಂದು ಅವರು ರಾಜೀನಾಮೆ ಸಲ್ಲಿಸಿದ್ದಾರೆ. ಎಸ್‌ಐಟಿ ಪ್ರಾಥಮಿಕ ವರದಿ ಆಧರಿಸಿ ಶಂಕಿತ ಆರೋಪಿಗಳ ಪೈಕಿ ಎಂಟು ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಿದ ಒಂದು ದಿನದ ನಂತರ ಅವರನ್ನು ಬಂಧಿಸಲಾಗಿದೆ. ಬಂಧಿತರಲ್ಲಿ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಆಪ್ತ ಕೂಡ ಇದ್ದಾನೆ. ಆದರೆ ಚಂಪತ್ ರಾಯ್ ಅವರನ್ನು ಬಂಧಿಸಿಲ್ಲ. ಇದು ಪ್ರಭಾವಿಗಳನ್ನು ರಕ್ಷಿಸುವ ಹುನ್ನಾರ ಎಂಬ ಆರೋಪವೂ ಬಂದಿದೆ. ಈ ಮಧ್ಯೆ ಅಪರಾಧಿಗಳನ್ನು ಸಾರ್ವಜನಿಕವಾಗಿ ನೇಣಿಗೇರಿಸಬೇಕು ಎಂದು ವಿಎಚ್‌ಪಿ ಮುಖಂಡ ಪ್ರವೀಣ್ ತೊಗಾಡಿಯಾ ಹೇಳಿದ್ದಾರೆ.

ರಾಮನ ಹೆಸರಿನಲ್ಲಿ ಮತ ಪಡೆದು ದೇಶವನ್ನು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಾಶಪಡಿಸಿ, ಬಹುತ್ವದ ದೇಶವನ್ನು ಹಿಂದೂ ರಾಷ್ಟ್ರ ಮಾಡುವತ್ತ ಕೊಂಡೊಯ್ಯುತ್ತಿರುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ರಾಮಮಂದಿರದ ಲೂಟಿಯ ಹೊಣೆ ಹೊರಬೇಕಲ್ಲದೇ ವಿಪಕ್ಷಗಳು ಹೊರಲು ಸಾಧ್ಯವೇ? ಮೊಘಲರು ಹಿಂದೂ ದೇವಸ್ಥಾನಗಳನ್ನು ಲೂಟಿ ಮಾಡಿ ಸಂಪತ್ತು ದೋಚುತ್ತಿದ್ದರು. ಇದೀಗ ಹಿಂದೂಗಳ ದೇವಸ್ಥಾನವನ್ನು ಹಿಂದೂಗಳೇ ಲೂಟಿ ಮಾಡುತ್ತಿದ್ದಾರೆ. ಅದನ್ನು ಪ್ರಶ್ನೆ ಮಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ದೇಣಿಗೆ ನೀಡದವರು, ಮಂದಿರಕ್ಕೆ ಭೇಟಿ ಕೊಡದವರಿಗೆ ಆರೋಪ ಮಾಡುವ ಹಕ್ಕಿಲ್ಲ ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಆದರೆ, ಇದು ಕೋಟ್ಯಂತರ ರಾಮ ಭಕ್ತರ, ಹಿಂದೂಗಳ ನಂಬಿಕೆಯ ಪ್ರಶ್ನೆ. ದೇವರನ್ನು ತಮ್ಮ ಸ್ವಾರ್ಥ ರಾಜಕಾರಣಕ್ಕೆ ಬಳಕೆ ಮಾಡಿಕೊಂಡವರು ಇದಕ್ಕೆ ಉತ್ತರಿಸಲೇಬೇಕಿದೆ. ಮಂದಿರಕ್ಕೆ ಶಿಲಾನ್ಯಾಸ ಮಾಡಿದವರು ಪ್ರಧಾನಿ ಮೋದಿ. ರಾಮ ಲಲ್ಲಾನ ಪ್ರತಿಷ್ಠಾಪನೆ ಮಾಡಿದವರೂ ಪ್ರಧಾನಿ ಮೋದಿ. ಈಗ ಮೌನ ವಹಿಸುವುದು ಶ್ರೀರಾಮ ದ್ರೋಹ.

ಭಾರತೀಯರ ಬೆನ್ನತ್ತಿದೆ 'ಪೌರತ್ವ' ಪ್ರಶ್ನೆ; ಜೊತೆಗೆ ಪಾಸ್‌ಪೋರ್ಟ್ ತಂದ ಅಸ್ಮಿತೆಯ ಆತಂಕ!

ಪ್ರಪಂಚದ ಯಾವುದೇ ದೇಶದಲ್ಲೂ ಮರಣವನ್ನು ಖಚಿತಪಡಿಸದ ಮರಣ ಪ್ರಮಾಣಪತ್ರವಾಗಲಿ ಅಥವಾ ಚಾಲನಾ ಸಾಮರ್ಥ್ಯವನ್ನು ನಿರೂಪಿಸದ ಚಾಲನಾ ಪರವಾನಗಿಯಾಗಲಿ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಆದರೆ, ಭಾರತದಲ್ಲಿ ಮಾತ್ರ ಪಾಸ್‌ಪೋರ್ಟ್ ಹೊಂದಿದ್ದರೂ ಪೌರತ್ವವನ್ನು ಸಾಬೀತುಪಡಿಸಲು ಮತ್ತೊಂದು ದಾಖಲೆಬೇಕು

2019ರಿಂದಲೂ ಭಾರತದಲ್ಲಿ ಪೌರತ್ವ ಮತ್ತು ನಾಗರಿಕ ಹಕ್ಕುಗಳ ವಿಷಯ ಚರ್ಚೆಯಲ್ಲಿದೆ. ಇದು ಕಾನೂನಾತ್ಮಕ ಅಥವಾ ರಾಜಕೀಯ ಚರ್ಚೆಗಳನ್ನು ದಾಟಿ, ಪ್ರತಿಯೊಬ್ಬ ಸಾಮಾನ್ಯ ಪ್ರಜೆಯ ದೈನಂದಿನ ಬದುಕಿನ ನೆಮ್ಮದಿ ಹಾಳುಗೆಡವಿದೆ. ಭಾರತೀಯ ನಾಗರಿಕರು ಪೌರತ್ವ ಪ್ರಶ್ನೆಯ ತೂಗುಗತ್ತಿಯಡಿ ಸಿಲುಕಿಕೊಂಡಿದ್ದಾರೆ. ತಲೆಮಾರುಗಳಿಂದ ಇದೇ ಮಣ್ಣಿನಲ್ಲಿ ಬದುಕಿ, ದೇಶದ ಪ್ರಗತಿಗೆ ಶ್ರಮಿಸಿದ ಸಾಮಾನ್ಯ ಜನರಲ್ಲಿ ಈಗ ತಾವು ಈ ದೇಶದವರೇ ಅಥವಾ ಅಲ್ಲವೇ ಎಂಬ ಕಳವಳ ಮೂಡುವಂತಹ ವಾತಾವರಣ ನಿರ್ಮಾಣವಾಗಿದೆ. ಸರ್ಕಾರದ ಸರಣಿ ನಿರ್ಧಾರಗಳು, ಆಡಳಿತಾತ್ಮಕ ಸಮೀಕ್ಷೆಗಳು ಹಾಗೂ ಇತ್ತೀಚಿನ ಅಧಿಕೃತ ಹೇಳಿಕೆಗಳು ನಾಗರಿಕರಲ್ಲಿ ಉಂಟಾಗಿರುವ ಅಭದ್ರತೆಯನ್ನು ಮತ್ತಷ್ಟು ತೀವ್ರಗೊಳಿಸಿವೆ.

ಯಾವಾಗ ನಾವು ಭಾರತೀಯರೇ ಅಲ್ಲ ಎಂದು ಡಿಟೆನ್ಶನ್ ಸೆಂಟರ್‌ಗೆ ಅಥವಾ ಗಡಿಯಾಚೆಗೆ ದಬ್ಬಿಬಿಡುತ್ತಾರೋ ಅಥವಾ 2ನೇ ದರ್ಜೆಯ ಪ್ರಜೆಗಳನ್ನಾಗಿಸಿಬಿಡುವರೇ ಎಂಬ ಆತಂಕ ಭಾರತೀಯರನ್ನು ಕಾಡುತ್ತಿದೆ. ಪ್ರಜಾಪ್ರಭುತ್ವದ ಅತಿ ದೊಡ್ಡ ಶಕ್ತಿಯಾದ ನಾಗರಿಕರನ್ನು ಸದಾ ತಮ್ಮ ಅಸ್ಮಿತೆಯನ್ನು ಸಾಬೀತುಪಡಿಸುವಂತೆ ಒತ್ತಾಯಿಸುವುದು ದೇಶದ ಆಂತರಿಕ ಸಾಮರಸ್ಯಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಅಂದಹಾಗೆ, ಭಾರತದ ಪೌರತ್ವ ರಾಜಕಾರಣದಲ್ಲಿ 2019ರ ವರ್ಷವು ಒಂದು ಪ್ರಮುಖ ತಿರುವು ಪಡೆದುಕೊಂಡಿತು. ಆ ವರ್ಷದ ಡಿಸೆಂಬರ್‌ನಲ್ಲಿ ಸಂಸತ್ತು ಅಂಗೀಕರಿಸಿದ ಪೌರತ್ವ ತಿದ್ದುಪಡಿ ಕಾಯ್ದೆಯು () 1955ರ ಮೂಲ ಪೌರತ್ವ ಕಾನೂನಿಗೆ ತಿದ್ದುಪಡಿ ತರುವ ಮೂಲಕ ಪಾಕಿಸ್ತಾನ, ಬಾಂಗ್ಲಾದೇಶ ಹಾಗೂ ಅಫ್ಘಾನಿಸ್ತಾನದಿಂದ 2014ರ ಡಿಸೆಂಬರ್ 13ಕ್ಕೂ ಮುಂಚಿತವಾಗಿ ಭಾರತಕ್ಕೆ ಬಂದಿರುವ ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ ಹಾಗೂ ಕ್ರಿಶ್ಚಿಯನ್ ಅಲ್ಪಸಂಖ್ಯಾತರಿಗೆ ಪೌರತ್ವ ಪಡೆಯುವ ಪ್ರಕ್ರಿಯೆಯನ್ನು ಸರಳಗೊಳಿಸಿತು. ಆದರೆ, ಮುಸ್ಲಿಮರನ್ನು ಈ ಪಟ್ಟಿಯಿಂದ ಹೊರಗಿಟ್ಟಿತು. ಇದು ಧರ್ಮಾಧಾರಿತ ತಾರತಮ್ಯ ಮತ್ತು ಸಂವಿಧಾನದ ಸಮಾನತೆಯ ತತ್ವಕ್ಕೆ ಅಕ್ಷರಶಃ ವಿರುದ್ಧವಾಗಿತ್ತು. ಜೊತೆಗೆ, ಈ ಸಿಎಎ ರಾಷ್ಟ್ರೀಯ ನಾಗರಿಕ ನೋಂದಣಿ () ಪ್ರಕ್ರಿಯೆಯೊಂದಿಗೆ ಜಾರಿಯಾಗಲಿದೆ ಎಂದು ಸರ್ಕಾರ ಘೋಷಿಸಿತು. ಇದು, ಇಡೀ ಭಾರತೀಯರ ಪೌರತ್ವವನ್ನೇ ಪ್ರಶ್ನಿಸುವ ಕೃತ್ಯವಾಗಿದ್ದರಿಂದ, ಭಾರೀ ಜನಾಕ್ರೋಶ ವ್ಯಕ್ತವಾಯಿತು.

ಅದಾಗಲೇ ಅಸ್ಸಾಂನಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನಡೆದ ಎನ್‌ಆರ್‌ಸಿ ಪರಿಷ್ಕರಣೆಯಲ್ಲಿ ಸುಮಾರು 19 ಲಕ್ಷ ಜನರನ್ನು ಹೊರಗಿಡಲಾಗಿತ್ತು. ಅವರೆಲ್ಲರೂ ಭಾರತೀಯ ಪೌರರಲ್ಲ ಎಂದು ಜೈಲಿಗೆ ದಬ್ಬುವ ಕೆಲಸಗಳು ಆರಂಭವಾದವು. ಇದು, ಒಂದು ವೇಳೆ ಎನ್‌ಆರ್‌ಸಿ ದೇಶಾದ್ಯಂತ ನಡೆದರೆ, ಬೃಹತ್ ಸಂಖ್ಯೆಯ ಭಾರತೀಯರೇ ಭಾರತದಲ್ಲಿ ಪೌರತ್ವವಿಲ್ಲದ ಖೈದಿಗಳಾಗುವ ಅಪಾಯಗಳ ಕುರಿತು ಎಚ್ಚರಿಕೆ ನೀಡಿತು. ಪರಿಣಾಮವಾಗಿ ದೆಹಲಿಯ ಶಾಹೀನ್ ಬಾಗ್ ಸೇರಿದಂತೆ ದೇಶಾದ್ಯಂತ ಮಹಿಳೆಯರ ನೇತೃತ್ವದಲ್ಲಿ ಬೃಹತ್ ಐತಿಹಾಸಿಕ ಹೋರಾಟಗಳು ನಡೆದವು.

ತೀವ್ರ ಸಾರ್ವಜನಿಕ ಪ್ರತಿಭಟನೆಗಳ ಒತ್ತಡದಿಂದಾಗಿ ದೇಶವ್ಯಾಪಿ ಎನ್‌ಆರ್‌ಸಿ ಪ್ರಕ್ರಿಯೆಯನ್ನು ಸರ್ಕಾರವು ತಾತ್ಕಾಲಿಕವಾಗಿ ಮುಂದೂಡಿತು. ಜೊತೆಗೆ, ರಾಷ್ಟ್ರೀಯ ಜನಸಂಖ್ಯಾ ನೋಂದಣಿಯನ್ನೂ () ಸ್ಥಗಿತಗೊಳಿಸಿತು. ಆದರೆ ಸಿಎಎ ಕಾಯ್ದೆಯನ್ನು ಸರ್ಕಾರ ಹಿಂಪಡೆಯಲಿಲ್ಲ; ಬದಲಿಗೆ 2024ರ ಮಾರ್ಚ್‌ನಲ್ಲಿ ಅದರ ಅಧಿಕೃತ ನಿಯಮಗಳನ್ನು ಪ್ರಕಟಿಸಿ, ಅರ್ಜಿಗಳನ್ನು ಸ್ವೀಕರಿಸಿ ಪೌರತ್ವ ನೀಡುವ ಪ್ರಕ್ರಿಯೆಯನ್ನು ಆರಂಭಿಸಿತು. ಈ ವಿಷಯವು ಇಂದಿಗೂ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ. ಕಾನೂನಿನ ಅನುಷ್ಠಾನದ ಸುತ್ತಲಿರುವ ಗೊಂದಲಗಳು ಸಾರ್ವಜನಿಕರಲ್ಲಿ ಪೌರತ್ವ ಪರೀಕ್ಷೆಯ ಆತಂಕ ಸದಾ ಜೀವಂತವಾಗಿರುವಂತೆ ಮಾಡಿದೆ.

ಐತಿಹಾಸಿಕ ಹೋರಾಟಗಳು ಸಿಎಎ-ಎನ್‌ಆರ್‌ಸಿ-ಎನ್‌ಪಿಆರ್‌ಗಳೆಂಬ ಪೆಡಂಭೂತಗಳನ್ನು ಹಿಮ್ಮೆಟ್ಟಿದ್ದವು. ಇದರಿಂದ, ವಿಚಲಿತಗೊಂಡಿದ್ದ ಮೋದಿ ಸರ್ಕಾರವು ತನ್ನ ಕೈಗೊಂಬೆಯಾಗಿರುವ ಚುನಾವಣಾ ಆಯೋಗದ ಮೂಲಕ ಈಗ ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ () ಪ್ರಕ್ರಿಯೆಯನ್ನು ಜಾರಿಗೆ ತಂದಿದೆ. ಇದು ನಾಗರಿಕರಲ್ಲಿ ಮತ್ತೊಂದು ಸುತ್ತಿನ ಅಭದ್ರತೆಯನ್ನು ಸೃಷ್ಟಿಸಿದೆ.

ಬಿಹಾರದಲ್ಲಿ ಮೊದಲು ಆರಂಭವಾದ ಎಸ್‌ಐಆರ್, ಅಲ್ಲಿ ಬರೋಬ್ಬರಿ 68 ಲಕ್ಷ ಮತದಾರರನ್ನು ಸಣ್ಣ-ಪುಟ್ಟ ಕ್ಷುಲ್ಲಕ ಕಾರಣಗಳಿಗಾಗಿ ಮತಪಟ್ಟಿಯಿಂದ ಹೊರಗಿಟ್ಟಿತು. ಆ ನಂತರ, 13 ರಾಜ್ಯಗಳಲ್ಲಿ ಎಸ್‌ಐಆರ್ ನಡೆದು ಈಗ ಬರೋಬ್ಬರಿ 6.5 ಕೋಟಿ ಭಾರತೀಯ ನಾಗರಿಕರು ಮತದಾನದ ಹಕ್ಕು ಕಳೆದುಕೊಂಡಿದ್ದಾರೆ. ಅವರೆಲ್ಲರನ್ನೂ ಮತಪಟ್ಟಿಯಿಂದ ಹೊರದಬ್ಬಲಾಗಿದೆ. ಕರ್ನಾಟಕವೂ ಸೇರಿದಂತೆ ಉಳಿದ ರಾಜ್ಯಗಳಲ್ಲಿ ಈಗ ಎಸ್‌ಐಆರ್ ನಡೆಯುತ್ತಿದೆ. ಎಲ್ಲ ರಾಜ್ಯಗಳಲ್ಲೂ ಎಸ್‌ಐಆರ್ ಪೂರ್ಣಗೊಂಡರೆ, ದೇಶಾದ್ಯಂತ ಸುಮಾರು 18 ಕೋಟಿಗೂ ಅಧಿಕ ಮಂದಿ ಮತದಾನದ ಹಕ್ಕು ಕಳೆದುಕೊಂಡು ಆತಂಕವಿದೆ. ವ್ಯವಸ್ಥಿತ ಲೋಪಗಳು ಮತ್ತು ದಾಖಲೆಗಳ ಕೊರತೆಯಿಂದಾಗಿ ಬಡವರು, ಅಲ್ಪಸಂಖ್ಯಾತರು, ಮಹಿಳೆಯರು ಹಾಗೂ ಗ್ರಾಮೀಣ ಭಾಗದ ಲಕ್ಷಾಂತರ ಕಾನೂನುಬದ್ಧ ನಾಗರಿಕರ ಹೆಸರುಗಳು ಮತಪಟ್ಟಿಯಿಂದ ನಾಪತ್ತೆಯಾಗಿವೆ.

ಇದೀಗ, ಮತದಾನದ ಹಕ್ಕು ಕಳೆದುಕೊಂಡವರಿಗೆ ಸರ್ಕಾರಿ ಸೌಲಭ್ಯಗಳು ಸೇರಿದಂತೆ ಯಾವುದೇ ಮೂಲಭೂತ ಹಕ್ಕುಗಳು ಮತ್ತು ಸೌಕರ್ಯಗಳು ದೊರೆಯುವುದಿಲ್ಲ. ಅವರ ಬ್ಯಾಂಕ್ ಖಾತೆಗಳನ್ನೂ ರದ್ದು ಮಾಡಲಾಗುತ್ತದೆ ಎಂದು ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಇದು ಎಸ್‌ಐಆರ್ ಕೇವಲ ಮತಪಟ್ಟಿ ಪರಿಷ್ಕರಣೆ ಮಾತ್ರವಲ್ಲ, ಪೌರತ್ವ ಪರಿಷ್ಕರಣೆ ಎಂಬುದನ್ನು ಜಗಜ್ಜಾಹೀರು ಮಾಡಿದೆ. ಆದ್ದರಿಂದಲೇ, ಇದನ್ನು ಆರಂಭದಲ್ಲಿಯೇ ಪರೋಕ್ಷ ಎನ್‌ಆರ್‌ಸಿ, ಹಿಂಭಾಗಿಲಿನಿಂದ ನಡೆಸಲಾಗುತ್ತಿರುವ ಪೌರತ್ವ ಪರೀಕ್ಷೆ ಎಂದು ಆರೋಪಿಸಲಾಗಿತ್ತು. ಅದು ಈಗ ದಿಟವಾಗುತ್ತಿದೆ.

ಇವೆಲ್ಲವುಗಳ ನಡುವೆ, ಇತ್ತೀಚೆಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದ () ಹಿರಿಯ ಅಧಿಕಾರಿಯೊಬ್ಬರು ''ಭಾರತೀಯ ಪಾಸ್‌ಪೋರ್ಟ್ ಪೌರತ್ವದ ನಿರ್ಣಾಯಕ ಪುರಾವೆಯಲ್ಲ. ಅದೊಂದು ಕೇವಲ ಪ್ರಯಾಣದ ದಾಖಲೆ ಮಾತ್ರ'' ಎಂದು ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಯು ಇಡೀ ವ್ಯವಸ್ಥೆಯ ವಿರೋಧಾಭಾಸವನ್ನು ಬಯಲು ಮಾಡಿದೆ.

1955ರ ಪೌರತ್ವ ಕಾಯ್ದೆಯ ಪ್ರಕಾರ, ಪೌರತ್ವವನ್ನು ಜನ್ಮ, ವಂಶ, ನೋಂದಣಿ ಮೂಲಕ ಮಾತ್ರ ನಿರ್ಧರಿಸಲಾಗುತ್ತದೆ ಎಂಬುದು ಕಾನೂನುಬದ್ಧ ಸತ್ಯ. ಹಾಗಿದ್ದರೂ, ವಿದೇಶಾಂಗ ಸಚಿವಾಲಯದ ವ್ಯತಿರಿಕ್ತ ಹೇಳಿಕೆಯು ಸಾರ್ವಜನಿಕರಲ್ಲಿ ಭಾರಿ ಗೊಂದಲವನ್ನುಂಟುಮಾಡಿದೆ. ಭಾರತದ ಅಧಿಕಾರಶಾಹಿಯು ಅತ್ಯಂತ ಕಟ್ಟುನಿಟ್ಟಾದ ಪೊಲೀಸ್ ಪರಿಶೀಲನೆ ನಡೆಸಿ, ರಾಷ್ಟ್ರೀಯ ಲಾಂಛನವನ್ನು ಮುದ್ರೆ ಒತ್ತಿ, ದೇಶದ ಅತ್ಯಂತ ಸುರಕ್ಷಿತ ಸೌಲಭ್ಯದಲ್ಲಿ ಮುದ್ರಿಸಿ ಕೇಂದ್ರ ಸರ್ಕಾರವೇ ನೀಡುವ ಅಧಿಕೃತ ದಾಖಲೆಯನ್ನು ಸ್ವತಃ ಸರ್ಕಾರವೇ ನಂಬಲು ಸಿದ್ಧವಿಲ್ಲ ಎಂಬುದು ಆಡಳಿತಾತ್ಮಕ ವ್ಯಂಗ್ಯವಾಗಿದೆ. ಜಗತ್ತಿನಾದ್ಯಂತ ವೀಸಾ ಪಡೆಯಲು, ಅಂತರರಾಷ್ಟ್ರೀಯ ವಿಮಾನಗಳನ್ನು ಏರಲು, ವಿದೇಶಿ ವಲಸೆ ಅಧಿಕಾರಿಗಳಿಗೆ ತಾವು ಭಾರತೀಯರು ಎಂಬುದನ್ನು ಖಾತ್ರಿಪಡಿಸಲು ಹಾಗೂ ವಿದೇಶಗಳಲ್ಲಿ ರಾಜತಾಂತ್ರಿಕ ರಕ್ಷಣೆಯನ್ನು ಪಡೆಯಲು ಸಾಕಷ್ಟು ವಿಶ್ವಾಸಾರ್ಹವೆಂದು ಪಾಸ್‌ಪೋರ್ಟ್‌ಅನ್ನು ಪರಿಗಣಿಸಲಾಗಿದೆ. ಆದರೆ, ಈ ದಾಖಲೆಯು ಸ್ವದೇಶದ ಗಡಿಯೊಳಗೆ ತನ್ನ ಅಧಿಕಾರವನ್ನು ಕಳೆದುಕೊಳ್ಳುತ್ತದೆ ಎಂದಾದರೆ, ಅರ್ಥವೇನು?

1967ರ ಪಾಸ್‌ಪೋರ್ಟ್ ಕಾಯ್ದೆಯ ಪ್ರಸ್ತಾವನೆಯು, ''ಭಾರತೀಯ ನಾಗರಿಕರ ನಿರ್ಗಮನವನ್ನು ನಿಯಂತ್ರಿಸಲು ಮತ್ತು ಪಾಸ್‌ಪೋರ್ಟ್‌ಗಳನ್ನು ನೀಡಲು'' ಈ ಕಾನೂನು ಅಸ್ತಿತ್ವದಲ್ಲಿದೆ ಎಂದು ಸ್ಪಷ್ಟವಾಗಿ ಹೇಳಿದ್ದರೂ, ವಿದೇಶಾಂಗ ಸಚಿವಾಲಯದ ಪ್ರಸ್ತುತ ನಿಲುವು ಈ ಕಾಯ್ದೆಯ ಆಶಯಕ್ಕೆ ವಿರುದ್ಧವಾಗಿದೆ.

ವಿದೇಶಾಂಗ ಸಚಿವಾಲಯದ ಈ ಹೇಳಿಕೆಯು ಅಂತರರಾಷ್ಟ್ರೀಯ ಮಟ್ಟದಲ್ಲೂ ಭಾರತದ ವಿಶ್ವಾಸಾರ್ಹತೆಗೆ ಧಕ್ಕೆ ತರಲಿದೆ. ಪ್ರತಿ ಭಾರತೀಯ ಪಾಸ್‌ಪೋರ್ಟ್‌ನ ಒಳಗಿನ ಪುಟದಲ್ಲಿ, ''ಈ ದಾಖಲೆಯನ್ನು ಹೊಂದಿರುವ ವ್ಯಕ್ತಿಗೆ ಮುಕ್ತವಾಗಿ ಪ್ರಯಾಣಿಸಲು ಅನುಮತಿಸಬೇಕು ಮತ್ತು ಅಗತ್ಯವಿರುವ ಎಲ್ಲ ನೆರವು ಹಾಗೂ ರಾಜತಾಂತ್ರಿಕ ರಕ್ಷಣೆಯನ್ನು ಒದಗಿಸಬೇಕು'' ಎಂದು ಭಾರತದ ರಾಷ್ಟ್ರಪತಿಗಳ ಪರವಾಗಿ ವಿನಂತಿಸಲಾಗಿರುತ್ತದೆ.

ಸಾರ್ವಭೌಮ ರಾಷ್ಟ್ರವೊಂದು ತನ್ನ ಪ್ರಜೆಗಳಿಗೆ ನೀಡಿರುವ ಪಾಸ್‌ಪೋರ್ಟ್‌ಅನ್ನು ಪೌರತ್ವದ ದಾಖಲೆಯಾಗಿ ಪರಿಗಣಿಸಲು ಸಿದ್ಧವಿಲ್ಲ ಎಂದಾದರೆ, ಅಂತಹ ದೇಶ ತನ್ನ ಪ್ರಜೆಗಳಿಗೆ ವಿದೇಶಗಳಲ್ಲಿ ಕಾನ್ಸುಲರ್ ರಕ್ಷಣೆಯನ್ನು ನೀಡುವಂತೆ ಇತರ ದೇಶಗಳನ್ನು ಕೇಳಲು ಸಾಧ್ಯವಾಗುವುದಿಲ್ಲ. ಲಂಡನ್, ಪ್ಯಾರಿಸ್ ಅಥವಾ ವಾಷಿಂಗ್ಟನ್‌ನ ವಲಸೆ ಅಧಿಕಾರಿಯೊಬ್ಬರು ಈ ದಾಖಲೆಯ ಮೇಲೆ ಸಂಪೂರ್ಣ ವಿಶ್ವಾಸ ಇಡಬೇಕು ಎಂದು ನಿರೀಕ್ಷಿಸುವ ಭಾರತ, ತನ್ನದೇ ದೇಶದೊಳಗೆ ತನ್ನ ನಾಗರಿಕರು ಪೌರತ್ವವನ್ನು ಸಾಬೀತುಪಡಿಸಲು ಅದೇ ದಾಖಲೆಯನ್ನು ಪರಿಗಣಿಸುವುದಿಲ್ಲ ಎನ್ನುವುದು ಜಾಗತಿಕವಾಗಿ ಮುಜುಗರ ಉಂಟುಮಾಡುತ್ತದೆ.

ಪ್ರಪಂಚದ ಯಾವುದೇ ದೇಶದಲ್ಲೂ ಮರಣವನ್ನು ಖಚಿತಪಡಿಸದ ಮರಣ ಪ್ರಮಾಣಪತ್ರವಾಗಲಿ ಅಥವಾ ಚಾಲನಾ ಸಾಮರ್ಥ್ಯವನ್ನು ನಿರೂಪಿಸದ ಚಾಲನಾ ಪರವಾನಗಿಯಾಗಲಿ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಆದರೆ, ಭಾರತದಲ್ಲಿ ಮಾತ್ರ ಪಾಸ್‌ಪೋರ್ಟ್ ಹೊಂದಿದ್ದರೂ ಪೌರತ್ವವನ್ನು ಸಾಬೀತುಪಡಿಸಲು ಮತ್ತೊಂದು ದಾಖಲೆಬೇಕು. ಇದು ನಾಗರಿಕರನ್ನು ತೀವ್ರ ಹತಾಶೆಗೆ ತಳ್ಳುತ್ತದೆ. ಮತ್ತೆ-ಮತ್ತೆ ಪೌರತ್ವವನ್ನು ಪ್ರಶ್ನಿಸುತ್ತದೆ. ಡಿಜಿಟಲ್ ಆಡಳಿತ ಮತ್ತು ಆಡಳಿತಾತ್ಮಕ ಸುಧಾರಣೆಗಳ ಬಗ್ಗೆ ಹೆಮ್ಮೆಪಡುವ ದೇಶದಲ್ಲಿ, ಒಬ್ಬ ನಾಗರಿಕನು ಜಗತ್ತಿನಾದ್ಯಂತ ಭಾರತೀಯನಾಗಿ ಗುರುತಿಸಿಕೊಂಡು, ಸ್ವದೇಶಕ್ಕೆ ಬಂದಾಗ ಅದೇ ಸರ್ಕಾರದಿಂದ ಶಂಕೆಗೆ ಒಳಗಾಗುವುದು ಆಘಾತಕಾರಿ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಭದ್ರತೆ ಮತ್ತು ನಾಗರಿಕರ ಹಕ್ಕುಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವುದು ಅತ್ಯಂತ ನಿರ್ಣಾಯಕ. ಒಂದು ಸರ್ಕಾರವು ತನ್ನದೇ ಪ್ರಜೆಗಳನ್ನು ಸದಾ ಶಂಕಿಸಿ ನೋಡುವುದು ಅಥವಾ ಅವರ ಹಕ್ಕುಗಳನ್ನು ಕಾಗದದ ಪತ್ರಗಳ ಆಧಾರದ ಮೇಲೆ ತೂಗುವುದು ದೇಶದ ಒಟ್ಟಾರೆ ಆಡಳಿತ ವ್ಯವಸ್ಥೆಯ ಮೇಲಿನ ನಂಬಿಕೆಯನ್ನೇ ಸಡಿಲಗೊಳಿಸುತ್ತದೆ. ಬಡತನ, ಅನಕ್ಷರತೆ ಹಾಗೂ ವಲಸೆಯ ಕಾರಣಗಳಿಂದಾಗಿ ತಳಮಟ್ಟದ ಜನರಲ್ಲಿ ಸೂಕ್ತ ದಾಖಲೆಗಳ ಕೊರತೆಗಳಿವೆ ಎಂಬುದು ಇಡೀ ಜಗತ್ತಿಗೆ ಗೊತ್ತಿರುವ ವಾಸ್ತವ. ಹೀಗಿರುವಾಗ, ಅಂತವರಿಗೆ ಪೂರಕವಾದ ಸಹಾಯಕ ವ್ಯವಸ್ಥೆ ಒದಗಿಸುವುದು ಸರ್ಕಾರಗಳ ಜವಾಬ್ದಾರಿ. ಆದರೆ, ಮೋದಿ ಸರ್ಕಾರವು ತನ್ನ ಪ್ರಜೆಗಳಿಗೆ ನೆರವು ನೀಡುವ ಬದಲು, ಅವರನ್ನು ಶಂಕಿಸುತ್ತದೆ. ಇಲ್ಲದ ದಾಖಲೆಗಳನ್ನು ಕೇಳುತ್ತಿದೆ. ನೀವು ಈ ದೇಶದ ಪ್ರಜೆಗಳೇ ಅಲ್ಲವೆಂದು ಮೂಲೆಗೆ ದೂಡುವ ಕ್ರೌರ್ಯ ಮೆರೆಯುತ್ತಿದೆ!


ಪಾಸ್‌ಪೋರ್ಟ್ ಪೌರತ್ವದ ಸಾಕ್ಷ್ಯವಲ್ಲ ಎಂದು ಜನರ ಮೇಲೆಯೇ ಹೊರೆ ಹಾಕಿದ ಮೋದಿ ಸರ್ಕಾರ

ಪಾಸ್‌ಪೋರ್ಟ್ ಕುರಿತಾದ ಕೇಂದ್ರ ಸರ್ಕಾರದ ಈ ನಿಲುವು ಅತ್ಯಂತ ಖಂಡನೀಯ ಹಾಗೂ ಅವೈಜ್ಞಾನಿಕವಾಗಿದೆ. ತಾನು ನೀಡುವ ಅತ್ಯುನ್ನತ ದಾಖಲೆಯನ್ನೇ ನಂಬದ ಮೋದಿ ಸರ್ಕಾರ, ತನ್ನ ದೇಶದ ಜನರನ್ನು ಹೇಗೆ ನಂಬುತ್ತದೆ ಎಂಬುದು ಮೂಲಭೂತ ಪ್ರಶ್ನೆ. ಪ್ರಜೆಗಳನ್ನು ಸಂರಕ್ಷಿಸಬೇಕಾದ ಹೊಣೆ ಹೊತ್ತಿರುವ ಕೇಂದ್ರ ಬಿಜೆಪಿ ಸರ್ಕಾರವು, ಜನರನ್ನು ಕಟಕಟೆಯಲ್ಲಿ ನಿಲ್ಲಿಸುವ ಇಂತಹ ಕಠೋರ ಹಾಗೂ ಜನವಿರೋಧಿ ನೀತಿಗಳನ್ನು ತಕ್ಷಣವೇ ಕೈಬಿಡಬೇಕು.

ಭಾರತದ ಪ್ರಜೆಯೊಬ್ಬ ವಿದೇಶಕ್ಕೆ ಪ್ರಯಾಣಿಸಲು ಬೇಕಾದ ಅತ್ಯುನ್ನತ ಹಾಗೂ ಅತಿಮುಖ್ಯ ದಾಖಲೆಯೆಂದರೆ ಅದು ಪಾಸ್‌ಪೋರ್ಟ್. ಆದರೆ, ಇಂತಹ ಪಾಸ್‌ಪೋರ್ಟ್ ಕೂಡ ಭಾರತೀಯ ಪೌರತ್ವದ ಅಧಿಕೃತ ಸಾಕ್ಷ್ಯವಲ್ಲ ಎಂಬ ಕೇಂದ್ರದ ನರೇಂದ್ರ ಮೋದಿ ಸರ್ಕಾರದ ಇತ್ತೀಚಿನ ಹೇಳಿಕೆಯು ದೇಶಾದ್ಯಂತ ಹೊಸದೊಂದು ಆತಂಕಕ್ಕೆ ಕಾರಣವಾಗಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯವು ನೀಡಿರುವ ಈ ಸ್ಪಷ್ಟೀಕರಣವು, ಸಾಮಾನ್ಯ ನಾಗರಿಕರನ್ನು ತೀವ್ರ ಗೊಂದಲಕ್ಕೆ ದೂಡಿದ್ದು, ತಾವೇನು ಮಾಡಬೇಕು ಎಂಬ ದಿಗ್ಭ್ರಮೆ ಸಾರ್ವಜನಿಕರಲ್ಲಿ ಮನೆಮಾಡಿದೆ.

ಇತ್ತೀಚೆಗೆ ಕೇಂದ್ರ ಸರ್ಕಾರವು ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಪ್ರಕಟಿಸಿದ ಪ್ರಶ್ನೋತ್ತರಗಳ () ಮೂಲಕ ಈ ಬಗ್ಗೆ ಸ್ಪಷ್ಟನೆ ನೀಡಿದೆ. 1967ರ ಪಾಸ್‌ಪೋರ್ಟ್ ಕಾಯ್ದೆ ಹಾಗೂ ಈ ಹಿಂದಿನ ಬಾಂಬೆ ಹೈಕೋರ್ಟ್‌ನ ತೀರ್ಪೊಂದನ್ನು ಉಲ್ಲೇಖಿಸಿರುವ ಸರ್ಕಾರ, ಪಾಸ್‌ಪೋರ್ಟ್ ಕೇವಲ ವಿದೇಶಗಳಿಗೆ ಪ್ರಯಾಣಿಸಲು ನೀಡಲಾಗುವ ದಸ್ತಾವೇಜೇ ಹೊರತು, ಅದು ಪೌರತ್ವವನ್ನು ಖಚಿತಪಡಿಸುವ ದಾಖಲೆಯಲ್ಲ ಎಂದು ಸ್ಪಷ್ಟಪಡಿಸಿದೆ. ಸರ್ಕಾರದ ವಾದದ ಪ್ರಕಾರ, ಪಾಸ್‌ಪೋರ್ಟ್ ಕಾಯ್ದೆಯಡಿ ನೀಡಲಾಗುವ ದಾಖಲೆಯು ಕೇವಲ ಅಂತಾರಾಷ್ಟ್ರೀಯ ಪ್ರಯಾಣಕ್ಕೆ ಸೀಮಿತವಾಗಿದ್ದು, ಪೌರತ್ವ ಕಾಯ್ದೆ 1955ರ ಅಡಿಯಲ್ಲಿ ಪೌರತ್ವವನ್ನು ನಿರ್ಧರಿಸಲು ಪ್ರತ್ಯೇಕ ನಿಯಮಗಳು ಮತ್ತು ದಾಖಲೆಗಳು ಅಗತ್ಯವಿದೆ ಎಂಬುದು ಈ ತಾಂತ್ರಿಕ ವಾದದ ತಿರುಳಾಗಿದೆ.

ಸರ್ಕಾರದ ಈ ನಿರ್ಧಾರವು ನಾಗರಿಕರ ಪಾಲಿಗೆ ಎಸಗಿದ ದೊಡ್ಡ ಅನ್ಯಾಯವಾಗಿದೆ. ತಾವೇ ಈ ದೇಶದ ಪ್ರಜೆಗಳು ಎಂದು ಸಾಬೀತುಪಡಿಸುವ ಸಂಪೂರ್ಣ ಹೊರೆಯನ್ನು ಪ್ರಜೆಗಳ



ಮೇಲೆಯೇ ನಿಷ್ಕರುಣೆಯಿಂದ ಹೊರಿಸಲಾಗಿದೆ. ಜನಸಾಮಾನ್ಯರು ತಮ್ಮ ದೈನಂದಿನ ಬದುಕಿನ ಜಂಜಾಟ ಹಾಗೂ ಹೊಟ್ಟೆಪಾಡಿನ ಹೋರಾಟಗಳ ನಡುವೆ, ತಲೆಮಾರುಗಳ ಹಿಂದಿನ ದಾಖಲೆಗಳನ್ನು ಹುಡುಕುತ್ತಾ ಸರ್ಕಾರಿ ಕಚೇರಿಗಳಿಗೆ ಅಲೆಯುವಂತಹ ದುಸ್ಥಿತಿಯನ್ನು ಈ ಕಠಿಣ ನಿಯಮವು ಸೃಷ್ಟಿಸುವ ಅಪಾಯವಿದೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರವು ಈ ಹಿಂದೆಯೇ ಸಿಎಎ () ಮತ್ತು ಎನ್‌ಆರ್‌ಸಿ () ತರುವ ಮೂಲಕ ದೇಶಾದ್ಯಂತ ಪೌರತ್ವದ ಕುರಿತು ದೊಡ್ಡ ಮಟ್ಟದ ಆತಂಕವನ್ನು ಸೃಷ್ಟಿಸಿತ್ತು. ಆ ಭಯದಿಂದ ಜನ ಇನ್ನೂ ಸಂಪೂರ್ಣವಾಗಿ ಹೊರಬಂದಿಲ್ಲ. ಇಂತಹ ಸೂಕ್ಷ್ಮ ಸಂದರ್ಭದಲ್ಲಿ ಪಾಸ್‌ಪೋರ್ಟ್ ಕೂಡ ಪೌರತ್ವದ ಸಾಕ್ಷ್ಯವಲ್ಲ ಎಂಬ ಹೇಳಿಕೆಯು, ಅಲ್ಪಸಂಖ್ಯಾತರು, ಬಡವರು, ಆದಿವಾಸಿಗಳು ಹಾಗೂ ಅನಕ್ಷರಸ್ಥರಲ್ಲಿ ಮತ್ತಷ್ಟು ಅಭದ್ರತೆಯ ಭಾವನೆಯನ್ನು ಮೂಡಿಸಿದೆ. ಸರ್ಕಾರವು ಜನರಲ್ಲಿ ವಿಶ್ವಾಸ ಮೂಡಿಸುವ ಬದಲು, ಸದಾ ಭಯದಲ್ಲಿ ಬದುಕುವಂತೆ ಮಾಡುತ್ತಿರುವುದು ಖೇದಕರ.

ಇಲ್ಲಿ ಕೇಂದ್ರ ಸರ್ಕಾರದ ಆಡಳಿತಾತ್ಮಕ ವಿಪರ್ಯಾಸ ಮತ್ತು ದ್ವಂದ್ವ ನೀತಿಯನ್ನು ನಾವು ಗಂಭೀರವಾಗಿ ಗಮನಿಸಬೇಕಿದೆ. ಪಾಸ್‌ಪೋರ್ಟ್ ಪಡೆಯಬೇಕಾದರೆ ಬಡವನಾಗಲಿ ಅಥವಾ ಸಿರಿವಂತನಾಗಲಿ, ಒಬ್ಬ ನಾಗರಿಕ ಆಧಾರ್ ಕಾರ್ಡ್, ಜನನ ಪ್ರಮಾಣಪತ್ರ, ಶಾಲಾ ದಾಖಲಾತಿ, ವೋಟರ್ ಐಡಿ ಸೇರಿದಂತೆ ಹತ್ತಾರು ಅಧಿಕೃತ ದಾಖಲೆಗಳನ್ನು ಸರ್ಕಾರಕ್ಕೆ ಒದಗಿಸಬೇಕು. ಇದಲ್ಲದೆ ಅತ್ಯಂತ ಕಠಿಣವಾದ ಮತ್ತು ಕೂಲಂಕಷವಾದ ಪೊಲೀಸ್ ಪರಿಶೀಲನೆಯೂ ನಡೆಯುತ್ತದೆ. ವ್ಯವಸ್ಥೆಯ ಇಷ್ಟೆಲ್ಲಾ ಭದ್ರತಾ ಮತ್ತು ಪರಿಶೀಲನಾ ಪ್ರಕ್ರಿಯೆಗಳ ಮೂಲಕ ನೀಡಲಾದ ಪಾಸ್‌ಪೋರ್ಟ್ ಪೌರತ್ವದ ಸಾಕ್ಷ್ಯವಲ್ಲ ಎಂದರೆ, ಕೇಂದ್ರ ಸರ್ಕಾರದ ತಪಾಸಣಾ ವ್ಯವಸ್ಥೆಯ ಮೇಲೆಯೇ ಗಂಭೀರವಾದ ಪ್ರಶ್ನೆಗಳು ಏಳುತ್ತವೆ.

ಅಧಿಕಾರಕ್ಕೆ ಬಂದಾಗಿನಿಂದಲೂ ಡಿಜಿಟಲ್ ಇಂಡಿಯಾ, ಭ್ರಷ್ಟಾಚಾರ ಮುಕ್ತ ಆಡಳಿತ ಹಾಗೂ ಏಕಗವಾಕ್ಷಿ ಯೋಜನೆಗಳ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುವ ಬಿಜೆಪಿ ಸರ್ಕಾರವು, ಪೌರತ್ವದ ವಿಚಾರದಲ್ಲಿ ಮಾತ್ರ ಜನರನ್ನು ಸಂಶಯದ ದೃಷ್ಟಿಯಿಂದ ನೋಡುತ್ತಿರುವಂತಿದೆ. ನಾಗರಿಕಸ್ನೇಹಿ ಆಡಳಿತವನ್ನು ನೀಡಬೇಕಾದ ಸರ್ಕಾರ, ದಿನಕ್ಕೊಂದು ಹೊಸ ನಿಯಮಗಳ ವ್ಯಾಖ್ಯಾನ ನೀಡುವ ಮೂಲಕ ಜನರನ್ನು ಆತಂಕದಲ್ಲಿ ಇಡುವುದನ್ನೇ ಒಂದು ರಾಜಕೀಯ ಅಸ್ತ್ರವನ್ನಾಗಿ ಮಾಡಿಕೊಂಡಂತಿದೆ. ಇದು ಪ್ರಜಾಪ್ರಭುತ್ವದ ಮೂಲಭೂತ ಆಶಯಗಳಿಗೆ ತದ್ವಿರುದ್ಧವಾದ ನಡೆಯಾಗಿದೆ.

ಈ ಬೆಳವಣಿಗೆಯು ಕೇವಲ ಕಾಗದ-ಪತ್ರಗಳ ದಾಖಲೆಗಳ ಪ್ರಶ್ನೆಯಲ್ಲ, ಇದು ಭಾರತೀಯರ ಸಾಂವಿಧಾನಿಕ ಹಕ್ಕುಗಳ ಮೇಲಿನ ನೇರ ಪ್ರಹಾರವಾಗಿದೆ. ನಾಳೆ ಯಾವುದೇ ಸರ್ಕಾರಿ ಅಧಿಕಾರಿಯು ಅಥವಾ ವ್ಯವಸ್ಥೆಯು ಪಾಸ್‌ಪೋರ್ಟ್ ಹೊಂದಿರುವ ವ್ಯಕ್ತಿಯೊಬ್ಬನ ಪೌರತ್ವವನ್ನು ದಿಢೀರನೆ ಪ್ರಶ್ನಿಸಿದರೆ, ಆತ ಮತ್ತೆ ಮೊದಲಿನಿಂದ ತನ್ನ ತಾತ-ಮುತ್ತಾತನ ಕಾಲದ ದಾಖಲೆಗಳನ್ನು ಹುಡುಕಿಕೊಂಡು ಹೋಗಬೇಕಾದ ಅನಿವಾರ್ಯತೆ ಎದುರಾಗುತ್ತದೆ. ನೆರೆಹಾವಳಿ, ಭೂಕಂಪ, ಅಥವಾ ಬಡತನದ ಕಾರಣದಿಂದ ದಾಖಲೆ ಕಳೆದುಕೊಂಡ ಅದೆಷ್ಟೋ ಮಂದಿ ಭಾರತೀಯರಿದ್ದಾರೆ. ಸರ್ಕಾರದ ಈ ನೀತಿಯು ಅಧಿಕಾರಿಗಳಿಗೆ ಬೇಕಾಬಿಟ್ಟಿ ವರ್ತಿಸಲು ಮತ್ತು ಜನಸಾಮಾನ್ಯರಿಗೆ ಕಿರುಕುಳ ನೀಡಲು ಮುಕ್ತ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಪಾಸ್‌ಪೋರ್ಟ್ ಕುರಿತಾದ ಕೇಂದ್ರ ಸರ್ಕಾರದ ಈ ನಿಲುವು ಅತ್ಯಂತ ಖಂಡನೀಯ ಹಾಗೂ ಅವೈಜ್ಞಾನಿಕವಾಗಿದೆ. ತಾನು ನೀಡುವ ಅತ್ಯುನ್ನತ ದಾಖಲೆಯನ್ನೇ ನಂಬದ ಮೋದಿ ಸರ್ಕಾರ, ತನ್ನ ದೇಶದ ಜನರನ್ನು ಹೇಗೆ ನಂಬುತ್ತದೆ ಎಂಬುದು ಮೂಲಭೂತ ಪ್ರಶ್ನೆ. ಪ್ರಜೆಗಳನ್ನು ಸಂರಕ್ಷಿಸಬೇಕಾದ ಹೊಣೆ ಹೊತ್ತಿರುವ ಕೇಂದ್ರ ಬಿಜೆಪಿ ಸರ್ಕಾರವು, ಜನರನ್ನು ಕಟಕಟೆಯಲ್ಲಿ ನಿಲ್ಲಿಸುವ ಇಂತಹ ಕಠೋರ ಹಾಗೂ ಜನವಿರೋಧಿ ನೀತಿಗಳನ್ನು ತಕ್ಷಣವೇ ಕೈಬಿಡಬೇಕು. ಪೌರತ್ವ ಸಾಬೀತುಪಡಿಸುವ ನಿಯಮಗಳನ್ನು ಆದಷ್ಟು ಸರಳೀಕರಿಸಿ, ದೇಶದ ಜನತೆಯಲ್ಲಿರುವ ಆತಂಕವನ್ನು ದೂರಮಾಡುವುದು ಹಾಗೂ ಜನಸಾಮಾನ್ಯರಿಗೆ ನೆಮ್ಮದಿಯ ಬದುಕು ಕಲ್ಪಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR